ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ




SHRIDEVI EDUCATION

ಮಾಸಪತ್ರಿಕೆ
ಸಂಪುಟ 2, ಸಂಚಿಕೆ 6, ಏಪ್ರಿಲ್ 2024

SHRIDEVI ANTARANGA
Monthly Magazine

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್



**ಸಂಪಾದಕರ ಅಂತರಂಗ**

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

"ಜನತೆಗೆ ತಮ್ಮ ಹಕ್ಕು ಮತ್ತು ಹೊಣೆಗಾರಿಕೆಯ ಅರಿವು ಇಲ್ಲದೇ ಹೋದರೆ ಆ ದೇಶದ ಪ್ರಜಾಪ್ರಭುತ್ವ ನಕಲಿ ಮಾಲಾಗುತ್ತದೆ. ಅಂತಹ ಕಡೆ ಪ್ರಜಾಪ್ರಭುತ್ವವನ್ನು ನಾಶ ಮಾಡುವುದು ಅತ್ಯಂತ ಸುಲಭ ಕೆಲಸ".

## ಮತದಾನ ಕರ್ತವ್ಯವೂ ಹೌದು, ಜವಾಬ್ದಾರಿಯೂ ಹೌದು!



ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮ ವೈಚಾರಿಕ ಬರಹ, ಕವನ, ಪ್ರಬಂಧ, ವಿಮರ್ಶೆ ಮತ್ತು ಭಾಷಣಗಳಿಂದ ಸಮಕಾಲೀನ ಜನತೆಯ ಪ್ರೀತಿ, ಅಭಿಮಾನಗಳಿಗೆ ಪಾತ್ರರಾಗಿದ್ದ ಡಾ.ಎಂ. ಗೋಪಾಲಕೃಷ್ಣ ಅಡಿಗ ಅವರು ತಮ್ಮ 'ಮಣ್ಣಿನ ವಾಸನೆ' ಪ್ರಬಂಧ ಸಂಕಲನದಲ್ಲಿ ಅತ್ಯಂತ ಪ್ರಮುಖವಾದ ಮಾತೊಂದನ್ನು ಬರೆದಿದ್ದಾರೆ. ಪ್ರಜಾಪ್ರಭುತ್ವವನ್ನು ಕುರಿತು ಚಿಂತಿಸುವಾಗ ಅವರ ಈ ಮಾತು ಅತ್ಯಂತ ಅರ್ಥಪೂರ್ಣವಾಗಿರುತ್ತದೆ. ಅವರ ಮಾತುಗಳಿವು. "ಜನತೆಗೆ ತಮ್ಮ ಹಕ್ಕು ಮತ್ತು ಹೊಣೆಗಾರಿಕೆಯ ಅರಿವು ಇಲ್ಲದೇ ಹೋದರೆ ಆ ದೇಶದ ಪ್ರಜಾಪ್ರಭುತ್ವ ನಕಲಿ ಮಾಲಾಗುತ್ತದೆ. ಅಂತಹ ಕಡೆ ಪ್ರಜಾಪ್ರಭುತ್ವವನ್ನು ನಾಶ ಮಾಡುವುದು ಅತ್ಯಂತ ಸುಲಭ ಕೆಲಸ".

ಈ ಮಾತುಗಳನ್ನು ಭಾರತದ ಪ್ರಜಾಪ್ರಭುತ್ವಕ್ಕೂ ಹೋಲಿಸಬಹುದು. ಭಾರತದಲ್ಲಿ ಐದು ವರ್ಷಕ್ಕೊಮ್ಮೆ ಚುನಾವಣೆಗಳು ನಡೆಯುತ್ತವೆ. ಜನತೆ ಉತ್ಸಾಹದಿಂದಲೇ ಮತ ಚಲಾಯಿಸುತ್ತಾರೆ. ಮತ ಹಾಕುವ ಜನರು ತಮ್ಮ ಹಕ್ಕು ಮತ್ತು ಜವಾಬ್ದಾರಿಯನ್ನು ಅರಿತು ಮತದಾನ ಮಾಡಿದ್ದಾರೆಯೇ ಎಂದು ಪ್ರಶ್ನೆ ಮಾಡಿದರೆ ಉತ್ತರ ನಿರಾಶೆಯ ರೂಪದಲ್ಲಿರುತ್ತದೆ. ಅಂದಾಕ್ಷಣ ದೇಶದ ಮತದಾರ ಯಶಸ್ವಿ ಪ್ರಜಾಪ್ರಭುತ್ವದ ಎಲ್ಲ ಸವಲತ್ತುಗಳನ್ನು ಪಡೆದುಕೊಂಡು ಸಂತೃಪ್ತನಾಗಿದ್ದಾನೆ ಎನ್ನುವ ಪರಿಸ್ಥಿತಿಯಿಲ್ಲ.

ದೇಶದ ಯುವಜನಾಂಗಕ್ಕೆ ಸೂಕ್ತ ಉದ್ಯೋಗವಿಲ್ಲ. ರೈತನ ಬದುಕು ಬಿರುಗಾಳಿಗೊಡ್ಡಿದ ಮಿಣುಕು ದೀಪದಂತಿದೆ. ಗೃಹಿಣಿ ತನ್ನ ಸೀಮಿತ ಆದಾಯದಲ್ಲಿ ಕುಟುಂಬವನ್ನು ಮುನ್ನಡೆಸಲು ಹೆಣಗುತ್ತಿದ್ದಾಳೆ. ಸಾರ್ವಜನಿಕ ಆರೋಗ್ಯ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಕೋವಿಡ್‌ನಂತಹ ಸಾಂಕ್ರಾಮಿಕ ರೋಗದ ಕಾಲದಲ್ಲಿ ನಮ್ಮ ದೇಶದ ಆರೋಗ್ಯಕ್ಷೇತ್ರ ಎಷ್ಟೊಂದು ಕಳಾಹೀನವಾಗಿತ್ತು ಎಂಬುದು ಎಲ್ಲರಿಗೂ ತಿಳಿದ ವಿಚಾರವಾಗಿದೆ.

ಮೂಲಭೂತಸೌಕರ್ಯಗಳ ವಿಚಾರದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿ ಭರದಿಂದ ಸಾಗುತ್ತಿದೆ. ನಮ್ಮ ಜಿಲ್ಲಾ ರಸ್ತೆ, ತಾಲ್ಲೂಕು ರಸ್ತೆ ಮತ್ತು ಹಳ್ಳಿಯ ರಸ್ತೆಗಳ ಸ್ಥಿತಿ ಹೇಗಿದೆ ಎಂಬುದು ಎಲ್ಲರಿಗೂ ತಿಳಿದ ವಿಚಾರ.

ರಾಜಧಾನಿ ಮತ್ತು ಅದರ ಸುತ್ತಮುತ್ತಲಿನ ಒಂದೆರಡು ಜಿಲ್ಲೆಗಳು ಅಭಿವೃದ್ಧಿಯಾದರೆ ಸಾಕೇ! ಹೀಗೆ ನಗರಗಳು ಅಭಿವೃದ್ಧಿಯಾದರೆ ಹಳ್ಳಿಯಿಂದ ನಿರಂತರವಾಗಿ ವಲಸೆ ಪ್ರಾರಂಭವಾಗುತ್ತದೆ. ಹೀಗೆ ವಲಸೆಗೆ ಹೋಗುವವರು ಗ್ರಾಮದ ಮುಗ್ಧ ಜನರು. ಅವರು ಕೂಲಿಯಾಳುಗಳಾಗಿ ಹೋಗುತ್ತಾರೆ. ಗ್ರಾಮಗಳಲ್ಲಿ ಅಸಹಾಯಕ ಹಿರಿಯ ನಾಗರಿಕರು ಮಾತ್ರವಿರುತ್ತಾರೆ.

ಸ್ವಾತಂತ್ರ್ಯ ಬಂದು 77 ವರ್ಷಗಳಾದರೂ ದೇಶದ ಅನೇಕ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಕೊಡಲು ನಮಗೆ ಸಾಧ್ಯವಾಗಿಲ್ಲ. ಈ ವಿಚಾರ ನಮ್ಮ ಮತದಾರರಿಗೆ ತಿಳಿದಿಲ್ಲವೆಂದಲ್ಲ. ಅನೇಕ ಸಮಸ್ಯೆಗಳ ಸುಳಿಗೆ ಸಿಲುಕಿ ನಮ್ಮ ಜನರು ನರಳುತ್ತಿದ್ದಾರೆ.

ಯಾವುದೇ ದೇಶದಲ್ಲಿ 80 ಕೋಟಿ ಜನರಿಗೆ ಉಚಿತ ಆಹಾರವನ್ನು ಸರ್ಕಾರ ನೀಡುವ ಪರಿಸ್ಥಿತಿಯಿದೆ ಎಂದರೆ ಅವರ ತಲಾದಾಯ ಎಷ್ಟು ಕಡಿಮೆಯಿರಬಹುದು ಎನ್ನುವುದನ್ನು ಯೋಚಿಸಿ. ▶▶ 2ನೇ ಪುಟಕ್ಕೆ...

**ಶ್ರೀದೇವಿ ವೈದ್ಯಕೀಯ ಮತ್ತು ಸಂಶೋಧನಾ ವಿದ್ಯಾಸಂಸ್ಥೆ**

## ನೇತ್ರಶಾಸ್ತ್ರ ವಿಭಾಗದ ಕಾರ್ಯಕ್ಷಮತೆ ಮತ್ತು ರೋಗಿಗಳೊಡನಿರುವ ಬದ್ಧತೆ

### ಆಪರೇಷನ್ ಕೂಡ ಒಂದು ಸುಂದರ ಅನುಭವ



▪ ಎನ್. ಭಾರತಿ

ಅಮೆರಿಕಾದ ಪಿಟ್ಸ್‌ಬರ್ಗ್‌ನಲ್ಲಿರುವ ಮಗಳಿಗೆ ನಿತ್ಯದಂತೆ ದೂರವಾಣಿ ಮಾಡಿ 'ನಾನು ನಾಳೆ ಕ್ಯಾಟ್‌ರಾಕ್ಟ್ ಆಪರೇಷನ್ ಮಾಡಿಸಿಕೊಳ್ಳಲು ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜ್‌ಗೆ ಹೋಗುತ್ತಿದ್ದೇನೆ' ಎಂದೆ. ನನ್ನ ಮಾತು ಕೇಳಿದ ತಕ್ಷಣ ಮಗಳು ನಗುತ್ತಾ 'ಅಲ್ಲಮ್ಮ ಜನರು ಚಿಕಿತ್ಸೆಗೆ ತುಮಕೂರಿನಿಂದ ಬೆಂಗಳೂರಿಗೆ ಬರುವ ಕತೆಯನ್ನು ಕೇಳಿದ್ದೇನೆ. ಅದರೆ ನಿಮ್ಮದು ಉಲ್ಟಾ ಕತೆಯಾಗಿದೆಯಲ್ಲಾ' ಎಂದಳು.

ಆಧುನಿಕ ಕಾಲದಲ್ಲಿ ಆಸ್ಪತ್ರೆ ಎಂದರೆ ವಿದ್ಯಾವಂತರು ಮತ್ತು ಮೇಲ್ವರ್ಗದ ಜನರ ಕಣ್ಣಿಗೆ ಕಾಣಿಸುವುದು 'ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ'ಗಳು ಮಾತ್ರ. ದೊಡ್ಡ ಕಟ್ಟಡ, ಒಳಗೆ ಮತ್ತು ಹೊರಗೆ ಕಣ್ಣಿಗೆ ಹಿತವೆನಿಸುವ ವಿನ್ಯಾಸ, ಆಕರ್ಷಕವಾಗಿ ಇಂಗ್ಲಿಷ್‌ನಲ್ಲಿ ಮಾತನಾಡುವ ಸ್ವಾಗತಕಾರಣಿ, ಎಲ್ಲರಲ್ಲೂ ಕಾಣುವ ಧಾವಂತದ ಮುಖ– ಇವು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಲಕ್ಷಣ,

ನಮ್ಮ ಕುಟುಂಬದ ಆಪ್ತರಾಗಿರುವ ಸಚಿವರ ಮಡದಿಯೊಬ್ಬರು ತಮ್ಮ ಕ್ಯಾಟ್‌ರಾಕ್ಟ್ ಆಪರೇಷನ್‌ಗೆ ಪ್ರಸಿದ್ಧ 'ನೇತ್ರಾಲಯ'ಕ್ಕೆ ಅಡ್ಮಿಟ್ ಆದರು. ಆಪರೇಷನ್ ಆಯ್ತು. ಅವರ ಸಮಸ್ಯೆ ಬಗೆ ಹರಿಯಲಿಲ್ಲ. ಕೊನೆಗೆ ಮತ್ತೊಂದು ಆಪರೇಷನ್‌ಗೊಳಪಡಬೇಕಾಯಿತು.

ಆಸ್ಪತ್ರೆಗಳು ಆಧುನಿಕವಾಗಿ ಮತ್ತು ಆಕರ್ಷಕವಾಗಿರಬೇಕಾಗಿಲ್ಲ ಎಂದು ಹೇಳುತ್ತಿಲ್ಲ. ಆದರೆ ಆಸ್ಪತ್ರೆಯ ಆಕರ್ಷಕ ವಾತಾವರಣವೇ ರೋಗಿಯ ಸಮಸ್ಯೆಗೆ ಪರಿಹಾರ ಕೊಡುತ್ತದೆ ಎನ್ನುವ ಹಾಗಿಲ್ಲ. ರೋಗಿಯ ಸಮಸ್ಯೆಗೆ ಪರಿಹಾರ ಕೊಡುವವರು ನುರಿತ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳು. ಇವರಿಗೆ ಉತ್ತಮ ಶೈಕ್ಷಣಿಕ ಅರ್ಹತೆಯಿರಬೇಕು. ವೃತ್ತಿಯಲ್ಲಿ ಕೌಶಲ್ಯತೆಯ ಜೊತೆಗೆ ರೋಗಿಯ ವಿಚಾರದಲ್ಲಿ ಉತ್ತಮ ಬದ್ಧತೆಯಿರಬೇಕು.

ವೈದ್ಯಕೀಯ ವೆಚ್ಚ ಎಲ್ಲಾ ತರಹದ ಜನರು ಭರಿಸುವಂತಿರಬೇಕು. ಮಹಾನಗರಗಳಲ್ಲಿರುವ ಖಾಸಗಿವಲಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಎಲ್ಲಾ ಕಾಯಿಲೆಗಳಿಗೂ ಅನಿವಾರ್ಯ ಎನ್ನುವ ಪರಿಸ್ಥಿತಿಯನ್ನು ನಮ್ಮ ವೈದ್ಯಕೀಯಕ್ಷೇತ್ರ ನಿರ್ಮಾಣ ಮಾಡುತ್ತಿದೆ. ಇಲ್ಲಿ ರೋಗಿಯ ಆರ್ಥಿಕಸ್ಥಿತಿ ಯಾವ ಮಟ್ಟದಲ್ಲೇ ಇರಲಿ, ಅವರು ಅನಿವಾರ್ಯವಾಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಹೋಗಬೇಕಾದ ವಾತಾವರಣ ನಿರ್ಮಾಣವಾಗಿದೆ. ಸಣ್ಣ ಆಪರೇಷನ್‌ಗಳನ್ನು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯವರೇ ಮಾಡಲು ಯೋಗ್ಯ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿರುವುದು ಅನೇಕರಿಗೆ ಆರ್ಥಿಕವಾಗಿ ತೊಂದರೆಯೆನಿಸಿದೆ. ಇದನ್ನು ಮತ್ತೆ ವಿಸ್ತೃತವಾಗಿ ಚರ್ಚೆ ಮಾಡಬಹುದು.

ಆಗಲೇ ತಿಳಿಸಿದಂತೆ ಯಾವುದೇ ಕಾಯಿಲೆ ಅಥವಾ ಆಪರೇಷನ್‌ಗೆ ಭೌತಿಕ ವೈಭವಕ್ಕಿಂತ ರೋಗಿಯ ಸೇವೆ ಮಾಡುವವರ ಸಾಮರ್ಥ್ಯ ಮತ್ತು ಬದ್ಧತೆ ಮುಖ್ಯವಾಗಿರುತ್ತದೆ. ಅಂದಾಕ್ಷಣ ಮೂಲಭೂತ ಸೌಕರ್ಯಗಳ ಅಗತ್ಯವಿಲ್ಲ ಎನ್ನುವ ಭಾವನೆ ಇಲ್ಲಿ ಬರುವುದಿಲ್ಲ. ಈಗ ವೈದ್ಯಕೀಯ ಲೋಕದಲ್ಲಿ ಅತ್ಯಾಧುನಿಕ ಉಪಕರಣಗಳು ತಮ್ಮ ಪ್ರಭಾವವನ್ನು ಗಳಿಸಿಕೊಂಡಿವೆ. ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯಲ್ಲಿ ಲೇಸರ್\PHACO ಶಸ್ತ್ರಚಿಕಿತ್ಸೆಯೇ ಹೆಚ್ಚು ಜನರ ಮನ್ನಣೆ ಪಡೆದಿರುವುದು. ಇಂತಹ ಸೌಲಭ್ಯವನ್ನು ರೋಗಿಗಳಿಗೆ ಒದಗಿಸುವುದು ಆಸ್ಪತ್ರೆಗಳ ಜವಾಬ್ದಾರಿಯಾಗಿರುತ್ತದೆ. ಜೊತೆಗೆ ಇವುಗಳ ನಿರ್ವಹಣೆ ಮಾಡುವವರ ಸಾಮರ್ಥ್ಯ ಸಹ ಮುಖ್ಯ. ಇದನ್ನೇ ನಾನು ಅಮೆರಿಕಾದಲ್ಲಿರುವ ಮಗಳಿಗೆ ಹೇಳಿದೆ.



"ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನ ನೇತ್ರಶಾಸ್ತ್ರ ವಿಭಾಗ ಹೆಚ್ಚು ಆಧುನಿಕತೆ ಪಡೆದುಕೊಂಡಿದೆ. ಅತ್ಯಾಧುನಿಕವಾದ ಉಪಕರಣಗಳಿವೆ. ಇಲ್ಲಿ ಎಂ.ಬಿ.ಬಿ.ಎಸ್.ವಿದ್ಯಾರ್ಥಿಗಳು ಮಾತ್ರವಲ್ಲ, ನೇತ್ರಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿದ್ದಾರೆ. ಅಂತಹವರಿಗೆ ಬೋಧನೆ ಮತ್ತು ಪ್ರಾಯೋಗಿಕ ತರಬೇತಿ ನೀಡಲು ಅನುಭವವುಳ್ಳ ವೈದ್ಯಕೀಯಕ್ಷೇತ್ರದ ಬೋಧನಾ ಸಿಬ್ಬಂದಿಗಳ ಅಗತ್ಯವಿರುತ್ತದೆ. ಜೊತೆಗೆ ಉನ್ನತ ದರ್ಜೆಯ ಲ್ಯಾಬ್ ಸೌಲಭ್ಯವಿದೆ. ನೇತ್ರದ ಕಾಯಿಲೆಯನ್ನು ವಿಶ್ಲೇಷಣೆ ಮಾಡುವವರಿಗೆ ವೈದ್ಯಕೀಯಶಾಸ್ತ್ರದ ಇತರ ಕ್ಷೇತ್ರಗಳು ಮೆಡಿಸಿನ್, ನ್ಯೂರೋ ಮತ್ತು ಕಾರ್ಡಿಯೋ ವಿಭಾಗದ ಸಹಾಯದ ಅಗತ್ಯವಿರುತ್ತದೆ. ಶ್ರೀದೇವಿ ಮೆಡಿಕಲ್ ಕಾಲೇಜ್‌ನಲ್ಲಿ ಈ ಎಲ್ಲಾ ಸೌಲಭ್ಯಗಳು ಒಂದೇ ಸೂರಿನಡಿ ದೊರೆಯುತ್ತದೆ".

ಶ್ರೀದೇವಿ ವೈದ್ಯಕೀಯ ಕಾಲೇಜಿನ ನೇತ್ರಶಾಸ್ತ್ರ ವಿಭಾಗವು ವಿವಿಧ ಧ್ಯೇಯೋದ್ದೇಶಗಳೊಂದಿಗೆ ಕೆಲಸ ಮಾಡುತ್ತಿದೆ. ತನ್ನ ಸಿಬ್ಬಂದಿ ಕೌಶಲ ವೃದ್ಧಿಸಿಕೊಳ್ಳುವುದರ ಜೊತೆಗೆ ನೇತ್ರಶಾಸ್ತ್ರ ಕುರಿತು ನಡೆದಿರುವ ಸಂಶೋಧನೆಯನ್ನು ಸಂಸ್ಥೆಯ ವೈದ್ಯರು ಅಳವಡಿಸಿಕೊಳ್ಳಬೇಕು ಎಂದು ಶ್ರೀದೇವಿ ವೈದ್ಯಕೀಯ ಸಂಸ್ಥೆ ತನ್ನ ಸಿಬ್ಬಂದಿಗೆ ಹೇಳುತ್ತಿರುತ್ತದೆ.

▶▶ 6ನೇ ಪುಟಕ್ಕೆ...

◀◀ ...ಮೊದಲನೇ ಪುಟದಿಂದ

ಅಂದರೆ ಕೆಳವರ್ಗದಲ್ಲಿರುವ ಬಡತನ ಮತ್ತು ಹಸಿವು ನಮ್ಮ ಊಹೆಗೆ ಸಿಲುಕುವಂತಹುದಲ್ಲ. ಈ ವಿಚಾರ ದೇಶದ ಪ್ರಜ್ಞಾವಂತ ಜನರ ಆತ್ಮಸಾಕ್ಷಿಯನ್ನು ಏಕೆ ಕಲಕುತ್ತಿಲ್ಲ ಎಂಬುದೇ ಮುಖ್ಯಪ್ರಶ್ನೆಯಾಗಿದೆ.

ತುಂಬಾ ದುರ್ದೈವದ ವಿಚಾರವೆಂದರೆ ಕರ್ನಾಟಕದ ಜನತೆ ತಮ್ಮ 'ಜಾಗೃತಪ್ರಜ್ಞೆ'ಗೆ ಇಡೀ ರಾಷ್ಟ್ರದಲ್ಲಿ ಖ್ಯಾತರಾಗಿದ್ದಾರೆ. ಅನೇಕ ಸಂದರ್ಭದಲ್ಲಿ ರಾಜ್ಯದ ಜನತೆ ಮತದಾನದ ಕರ್ತವ್ಯ ನಿರ್ವಹಣೆಯಲ್ಲಿ ತಪ್ಪು ಮಾಡಿ ಪಶ್ಚಾತ್ತಾಪಕ್ಕೊಳಗಾಗಿದ್ದಾರೆ.

ಈಗ ಮತ್ತೆ ಚುನಾವಣೆಗಳು ಬಂದಿದ್ದು, ಮತದಾನಕ್ಕೆ ಕೆಲವೇ ದಿನಗಳು ಬಾಕಿ ಉಳಿದಿದೆ. ಅಂತಹ ಸಂದರ್ಭದಲ್ಲಿ ರಾಜ್ಯ ಮತ್ತು ತುಮಕೂರು ಲೋಕಸಭಾ ಕ್ಷೇತ್ರದ ಜನತೆಯ ಮುಂದೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸಲಿಚ್ಛೇನೆ. ತುಮಕೂರು ಲೋಕಸಭಾ ಕ್ಷೇತ್ರದ ಸಮಸ್ಯೆಗಳು, ರಾಜ್ಯದ ಸಮಸ್ಯೆಗಳು ಹೌದು, ವಿಶಾಲಾರ್ಥದಲ್ಲಿ ರಾಷ್ಟ್ರದ ಸಮಸ್ಯೆಗಳು ಹೌದು!

ತುಮಕೂರು ಜಿಲ್ಲೆಯಲ್ಲಿ 11 ತಾಲ್ಲೂಕುಗಳಿವೆ. ಈ ಜಿಲ್ಲೆ ಮೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಣಿಗಲ್ ವಿಧಾನಸಭಾ ಕ್ಷೇತ್ರವಿದೆ. ಪಾವಗಡ ಮತ್ತು ಸಿರಾ ವಿಧಾನಸಭಾ ಕ್ಷೇತ್ರಗಳು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸೇರುತ್ತವೆ. ಮಧುಗಿರಿ, ಕೊರಟಗೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ, ಗುಬ್ಬಿ, ತುಮಕೂರು ಗ್ರಾಮಾಂತರ ಮತ್ತು ತುಮಕೂರು ನಗರ ವಿಧಾನಸಭಾ ಕ್ಷೇತ್ರಗಳು ತುಮಕೂರು ಲೋಕಸಭಾಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ.

ಪ್ರಸಿದ್ಧ ಆರ್ಥಿಕ ತಜ್ಞರಾಗಿದ್ದ ಡಾ.ಡಿ.ಎಂ.ನಂಜುಂಡಪ್ಪ ಪ್ರಾದೇಶಿಕ ಅಸಮತೋಲನ ಸಮಿತಿ ತುಮಕೂರಿನ ಕೆಲವು ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ ತಾಲ್ಲೂಕು ಎಂದು ಪರಿಗಣಿಸಿದೆ.


ಪ್ರಸ್ತುತ 7 ತಾಲ್ಲೂಕುಗಳಲ್ಲಿ ಭೀಕರವಾದ ಬರದ ಪರಿಸ್ಥಿತಿಯಿದೆ. ತುಮಕೂರಿನ ಜಿಲ್ಲಾ ಪಂಚಾಯಿತ್‌ನ ಅಂಕಿ–ಅಂಶದ ಆಧಾರದ ಮೇಲೆ ಹೇಳುವುದಾದರೆ 563 ಹಳ್ಳಿಗಳಲ್ಲಿ ಕುಡಿಯುವ ನೀರನ್ನು ಕುರಿತಂತೆ ಅತ್ಯಂತ ದಯನೀಯ ಸ್ಥಿತಿಯಿದೆ.

ಕುಡಿಯುವ ನೀರಿಗಾಗಿ ರೂಪುಗೊಂಡಿರುವ 'ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ' ಕುಂಟುತ್ತಾ ಸಾಗಿದೆ. ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಯ ಭಾಗವಾದ 'ಬೈರಗೊಂಡ್ಲು' ಜಲಾಶಯದ ನಿರ್ಮಾಣ ಭೂಸ್ವಾಧೀನ ಪ್ರಕ್ರಿಯೆ ನಡೆಯದ ಕಾರಣ ನನೆಗುದಿಗೆ ಬಿದ್ದಿದೆ. ರೈತರಿಗೆ ನ್ಯಾಯೋಚಿತ ಬೆಲೆಯನ್ನು ನೀಡಿ ಭೂಮಿ ಪಡೆಯಲು ಇಷ್ಟು ವರ್ಷ ಸಮಯವನ್ನು ವ್ಯರ್ಥ ಮಾಡುವುದು ಸರಿ ಅಲ್ಲವೆ?

ಯೋಜನೆಗಳು ಸಮಯಕ್ಕೆ ಸರಿಯಾಗಿ ಪೂರ್ಣವಾಗದಿದ್ದರೆ ಅದರಿಂದಾಗುವ ಅಪಾಯವನ್ನು ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ಹೇಳುತ್ತದೆ. ಯೋಜನೆಯ ಪ್ರಾರಂಭದ ಅಂದಾಜು ವೆಚ್ಚ 12 ಸಾವಿರ ಕೋಟಿ ರೂಗಳಷ್ಟಿತ್ತು. ಇಂದು ಆ ಯೋಜನೆಯ ವೆಚ್ಚ 23 ಸಾವಿರ ಕೋಟಿರೂಗೆ ಏರಿಕೆಯಾಗಿದೆ. ಇಷ್ಟಾದರೂ ಎತ್ತಿನ ಹೊಳೆ ಕುಡಿಯುವ ನೀರಿನ ಯೋಜನೆ ಎಂದಿಗೆ ಪೂರ್ಣಗೊಳ್ಳುತ್ತದೋ ಆ ಪರಮಾತ್ಮನೇ ಬಲ್ಲ!

ದಾವಣಗೆರೆ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಕೆರೆಗೆ ನೀರು ತುಂಬಿಸುವ 'ಭದ್ರಾ ಮೇಲ್ದಂಡೆ ಯೋಜನೆ' ಪೂರ್ಣಗೊಂಡರೆ 5,57,022 ಎಕರೆಗೆ ನೀರಾವರಿ ಸೌಲಭ್ಯ ದೊರೆಯುತ್ತದೆ. ಈ ಯೋಜನೆ ಅನುಷ್ಠಾನದಿಂದ ನಮ್ಮ ರಾಜ್ಯ 29.50 ಟಿ.ಎಂ.ಸಿ. ನೀರನ್ನು ಬಳಕೆ ಮಾಡಿಕೊಳ್ಳುವ ಅವಕಾಶ ದೊರೆಯುತ್ತದೆ.

# ಮತದಾನ ಕರ್ತವ್ಯವೂ ಹೌದು, ಜವಾಬ್ದಾರಿಯೂ ಹೌದು!



ಮಧುಗಿರಿ ಬೆಟ್ಟ

ಕೇಂದ್ರ ಸರ್ಕಾರ ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿ 5,300 ಕೋಟಿ.ರೂಗಳನ್ನು ನೀಡುವ ವಾಗ್ದಾನ ನೀಡಿತ್ತು. ಆದರೆ ಹಣ ಬಿಡುಗಡೆಯಾಗಲಿಲ್ಲ. ರಾಜ್ಯ ಸರ್ಕಾರ ತನ್ನ ಸಂಪನ್ಮೂಲದಿಂದ ಯೋಜನೆ ಪ್ರಾರಂಭಿಕ ಕೆಲಸಗಳನ್ನು ಮಾಡಬಹುದಾಗಿತ್ತು.

ಹೇಮಾವತಿ ನೀರು ತುಮಕೂರಿಗೆ ಬರಬೇಕು ಎನ್ನುವುದು ಜಿಲ್ಲೆಯ ಜನರ ಬಹುದಿನದ ಕನಸು. ಹೇಮಾವತಿ ನಾಲೆಯ ಕಾಮಗಾರಿ ಕೆಲಸ ಪೂರ್ಣಗೊಂಡಿಲ್ಲ. ಜಿಲ್ಲೆಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಎಲ್ಲರ ಮೇಲೂ ಇದೆ.

ತುಮಕೂರು ಜಿಲ್ಲೆಯ ಪ್ರಮುಖ ಬೆಳೆ ತೆಂಗು, ರಾಗಿ ಮತ್ತು ಕಡಲೆಕಾಯಿ. ತೆಂಗು ಮತ್ತು ರಾಗಿಗೆ ಕನಿಷ್ಠ ಬೆಂಬಲ ಬೆಲೆ ಸಿಗುತ್ತಿಲ್ಲ. ಕೊಬ್ಬರಿ ಕೊಳ್ಳುವ ಕೇಂದ್ರ ಪ್ರಾರಂಭವಾದಾಗ ಉಂಟಾದ ನೂಕುನುಗ್ಗಲನ್ನು ನೋಡಿದರೆ ದೇಶದ ರೈತನ ಅಸಹಾಯಕ ಸ್ಥಿತಿ ತಿಳಿಯುತ್ತದೆ. ಎಲ್ಲಾ ಬೆಲೆ ಗಗನಕ್ಕೇರಿದರೂ ತೆಂಗು ಬೆಲೆಯಲ್ಲಿ ಹಳೆಯ ದರದ ಸ್ಥಿರತೆಯನ್ನು ಕಾಯ್ದುಕೊಂಡಿರುವುದು ಕ್ರೂರ ವ್ಯಂಗ್ಯವೇ ಸರಿ.

ಜಿಲ್ಲೆಯ ಗ್ರಾಮೀಣ ಮಹಿಳೆಯ ಕಾಮಧೇನು ಎಂದು ಪರಿಗಣಿತವಾಗಿರುವ ಹಾಲಿನ ಉದ್ಯಮ ಬೆಳವಣಿಗೆಯಿಲ್ಲದೆ ತಟಸ್ಥವಾಗಿದೆ.

ಸರ್ಕಾರಗಳು ಹಳೆಯ ವಿಚಾರಗಳನ್ನು ಹೇಳುತ್ತಾ ಹೋದರೆ ಪ್ರಯೋಜನವಿಲ್ಲ. ಗ್ರಾಮೀಣ ಪ್ರದೇಶದಲ್ಲಿ 'ನರೇಗಾ'ಕ್ಕೆ ಎಷ್ಟೊಂದು ಜನರು ಬರುತ್ತಿದ್ದಾರೆ ಎನ್ನುವುದನ್ನು ನೋಡಿದಾಗ ಆ ಭಾಗದಲ್ಲಿ ಎಷ್ಟೊಂದು ನಿರುದ್ಯೋಗವಿದೆ ಎನ್ನುವುದು ತಿಳಿಯುತ್ತದೆ. ಹೋಬಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ಉದ್ಯೋಗಗಳು ಸೃಷ್ಟಿಯಾಗಬೇಕು.

ಗುಬ್ಬಿ ಬಳಿ ಹೆಚ್.ಎ.ಎಲ್. ಹೆಲಿಕಾಪ್ಟರ್ ಘಟಕ ಪ್ರಾರಂಭವಾಗಿದೆ. ಆದರೆ ಅಲ್ಲಿ ಉತ್ಪಾದನೆ ಆರಂಭವಾಗಿಲ್ಲ. ಇನ್ನುಳಿದಂತೆ ನಿರೀಕ್ಷೆ ಮಟ್ಟದಲ್ಲಿ ಉದ್ಯೋಗ ಸೃಷ್ಟಿಯಾಗಿಲ್ಲ.

ತುಮಕೂರಿಗೆ ಹೊಂದಿಕೊಂಡಂತೆ ವಸಂತನರಸಾಪುರ ಕೈಗಾರಿಕಾ ಬಡಾವಣೆಯಲ್ಲಿ ಹತ್ತಾರು ಉದ್ಯಮಗಳು ಪ್ರಾರಂಭವಾಗಿದೆ. ಉದ್ಯೋಗ ಸೃಷ್ಟಿಯ ದೃಷ್ಟಿಯಿಂದ ಅಂತಹ ಪ್ರಯೋಜನ ದೊರೆಯುತ್ತಿಲ್ಲ. ಇಲ್ಲಿ ಕೆಲವು ಆಹಾರ ಉತ್ಪಾದನಾ ಘಟಕಗಳು ಪ್ರಾರಂಭವಾಗುತ್ತಿದೆ. ತುಮಕೂರು ಜಿಲ್ಲೆ ಗಾರ್ಮೆಂಟ್ ಉದ್ಯಮಕ್ಕೆ ಪೂರಕವಾದ ವಾತಾವರಣವನ್ನು ಪಡೆದುಕೊಂಡಿದೆ. ಆಟೋಮೊಬೈಲ್ ಕ್ಷೇತ್ರದಲ್ಲೂ ತುಮಕೂರು ಬಲಿಷ್ಠವಾದ ಸ್ಥಿತಿಯಲ್ಲಿದೆ.

ತುಮಕೂರು ನಗರವನ್ನು ಉದ್ಯಮಿಗಳು ಬೆಂಗಳೂರು ನಗರದ ಶಾಖೆಯೆಂದು ಭಾವಿಸಿದರೆ ಪ್ರಯೋಜನವಿಲ್ಲ. ಇಲ್ಲಿ ಕಚೇರಿ ಮಾತ್ರವಿರುತ್ತದೆ. ಉತ್ಪಾದನೆ ಬೆಂಗಳೂರು ಅಥವಾ ಬೇರೆ ಬೃಹತ್ ನಗರಗಳಲ್ಲಿ ಆಗಬಹುದು. ಇಲ್ಲಿನವರಿಗೆ ಸೆಕ್ಯೂರಿಟಿ ಕೆಲಸವನ್ನು ಕೊಡಬಹುದು. ಕೊನೆಗೆ ಅದಕ್ಕೂ ಹೊರರಾಜ್ಯದವರಿಗೆ ಮಣೆ ಹಾಕಬಹುದು.

ಯಾವುದೇ ಬೃಹತ್ ಉದ್ಯಮಗಳು ತುಮಕೂರು ಜಿಲ್ಲೆಗೆ ಬಂದರೆ ಜನರು ಅದನ್ನು ಸ್ವಾಗತಿಸುತ್ತಾರೆ. ಅವರಿಗೆ ಬೇಕಾದ ಭೂಮಿ ಮತ್ತು ಮಾನವ ಸಂಪನ್ಮೂಲವನ್ನು ಒದಗಿಸುತ್ತಾರೆ. ಸರ್ಕಾರ ಅವರಿಗೆ ಎಲ್ಲಾ ಸವಲತ್ತುಗಳನ್ನು ಕೊಡುತ್ತದೆ. ಇಷ್ಟಾದರೂ ಸ್ಥಳೀಯರಿಗೆ ಉದ್ಯೋಗ ದೊರೆಯದಿದ್ದರೆ ಅದರಿಂದ ಜಿಲ್ಲೆಯ ಜನರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ.

1992ರ ಹೊಸ ಆರ್ಥಿಕನೀತಿ ಗ್ರಾಮೀಣ ಪ್ರದೇಶದ ನಿರುದ್ಯೋಗವನ್ನು ಹೆಚ್ಚಿಸಿದೆ ಎನ್ನುವ ತಜ್ಞರ ಅಭಿಪ್ರಾಯವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಈ ನೀತಿ ಬೃಹತ್ ನಗರಗಳನ್ನು ನಿರ್ಮಾಣ ಮಾಡುತ್ತಿದೆ. ಗ್ರಾಮೀಣ ಪ್ರದೇಶದ ಯಾವುದೇ ಸವಲತ್ತುಗಳಿಲ್ಲದೆ ಸೊರಗುತ್ತದೆ.

ಹಿಂದೆ ಸರ್ಕಾರಿ ಕ್ಷೇತ್ರದಲ್ಲಿ ಉದ್ಯೋಗಗಳು ಸೃಷ್ಟಿಯಾದಾಗ ಪರಿಶಿಷ್ಟ ಜಾತಿ ಮತ್ತು ವರ್ಗ, ಹಿಂದುಳಿದ ಸಮುದಾಯ ಹಾಗೂ ಗ್ರಾಮೀಣ ಭಾಗಕ್ಕೆ ನ್ಯಾಯ ದೊರೆಯುತ್ತಿತ್ತು. ಈಗ ನಗರ ಪ್ರದೇಶದ ಖಾಸಗಿವಲಯದಲ್ಲಿ ಉದ್ಯೋಗ ಸೃಷ್ಟಿಯಾದರೆ ಗ್ರಾಮೀಣ ಭಾಗದ ಜನರಿಗೆ ಅಂತಹ ಪ್ರಯೋಜನವಾಗುತ್ತಿಲ್ಲ. ಪ್ರಸ್ತುತ ಭಾರತದಲ್ಲಿ ಶೇಕಡ 23ರಷ್ಟು ನಿರುದ್ಯೋಗವಿರುವುದು ಆತಂಕಕಾರಿ ವಿಚಾರವಲ್ಲವೇ?

ತುಮಕೂರು ಜಿಲ್ಲೆಯ ಯೋಜನೆಗಳು ಹೇಗೆ ಸೊರಗುತ್ತಿವೆ ಎಂಬುದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಬೆಂಗಳೂರು–ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ಯೋಜನೆ ಯಾವಾಗ ಮುಗಿಯುತ್ತದೋ ಯಾರಿಗೂ ಗೊತ್ತಿಲ್ಲ. ಬೆಂಗಳೂರು–ಮೈಸೂರು ಹೆದ್ದಾರಿ ಯೋಜನೆ ಹೇಗೆ ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡಿತ್ತು ಎಂಬುದು ನಮ್ಮ ಕಣ್ಮುಂದಿರುವ ನಿದರ್ಶನವಾಗಿದೆ.

ಚನ್ನೈ–ಮುಂಬಯಿ ಕಾರಿಡಾರ್ ಮತ್ತು ತುಮಕೂರು– ಮಂಗಳೂರು ಕೈಗಾರಿಕಾ ಕಾರಿಡಾರ್ ಯೋಜನೆಗಳನ್ನು ಆಯವ್ಯಯದಲ್ಲಿ ಹೇಳಲಾಗಿತ್ತು. ಆದರೆ ಯಾವುದೇ ಕಾಮಗಾರಿ ಪ್ರಾರಂಭವಾಗಿಲ್ಲ.

ತುಮಕೂರು–ದಾವಣಗೆರೆ ರೈಲ್ವೆ ಯೋಜನೆ ಕಳೆದ ಐವತ್ತು ವರ್ಷಗಳಿಂದ ಹೇಳುತ್ತಲೇ ಬಂದಿರುವ ಯೋಜನೆ. ನಮ್ಮ ಜಿಲ್ಲೆಯ ನಾಯಕರ ಇಚ್ಛಾಶಕ್ತಿಯ ಕೊರತೆಯಿಂದ ಅದು ಅನುಷ್ಠಾನಗೊಂಡಿಲ್ಲವೆಂದು ಪ್ರಜ್ಞಾವಂತರು ಅಭಿಪ್ರಾಯಪಡುತ್ತಾರೆ. ಪಾವಗಡ ತಾಲ್ಲೂಕಿನ ಅಭಿವೃದ್ಧಿಗೆ ಪೂರಕವಾಗಿರುವ ತುಮಕೂರು – ರಾಯದುರ್ಗ ರೈಲ್ವೆ ಯೋಜನೆಗೆ ಲಕ್ವ ಹೊಡೆದಿದೆ. ಪಾವಗಡದಲ್ಲಿ ಏಷ್ಯಾ ಖಂಡದಲ್ಲೇ ಬೃಹತ್ ಎನಿಸಿರುವ 'ಸೋಲಾರ್ ಪಾರ್ಕ್' ಇದೆ. ಇಲ್ಲಿ ಮತ್ತಷ್ಟು ಕೈಗಾರಿಕಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅವಕಾಶವಿದೆ. ತುಮಕೂರು ಜಿಲ್ಲೆ ಶಿಕ್ಷಣಸ್ನೇಹಿ ಜಿಲ್ಲೆಯೆಂದು ಖ್ಯಾತಿ ಪಡೆದಿದೆ. ಜಿಲ್ಲೆಯಲ್ಲಿ 89 ಪದವಿ ಕಾಲೇಜುಗಳಿವೆ. 8 ಇಂಜಿನಿಯರಿಂಗ್ ಕಾಲೇಜುಗಳಿವೆ 3 ಮೆಡಿಕಲ್ ಕಾಲೇಜುಗಳಿವೆ. 1 ಡೆಂಟಲ್ ಕಾಲೇಜುಗಳು ಮತ್ತು 12 ಪಾಲಿಟೆಕ್ನಿಕ್‌ಗಳಿವೆ.

ತುಮಕೂರು ಜಿಲ್ಲೆಗೆ ಐ.ಐ.ಟಿ.ಯಂತಹ ಉನ್ನತ ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಗತ್ಯವಿದೆ. ತುಮಕೂರು ನಗರದಲ್ಲಿ ಕೌಶಲಾಭಿವೃದ್ಧಿಗೆ ಸಹಾಯ ಮಾಡುವ ಸಂಸ್ಥೆಗಳ ಅಗತ್ಯವಿದೆ. ಇದರಿಂದ ಜಿಲ್ಲೆಯ ಯುವಜನಾಂಗಕ್ಕೆ ಸಾಕಷ್ಟು ಪ್ರಯೋಜನಗಳು ದೊರೆಯುತ್ತವೆ.

ತುಮಕೂರು ಜಿಲ್ಲೆಯ ಆರೋಗ್ಯವಲಯ ಸರ್ಕಾರದ ಸಹಾಯವನ್ನು ನಿರೀಕ್ಷೆ ಮಾಡುತ್ತಿದೆ. ಜಿಲ್ಲೆಯಲ್ಲಿ 140 ಪ್ರಾಥಮಿಕ ಆರೋಗ್ಯ ಘಟಕಗಳಿವೆ. 10 ಸರ್ಕಾರಿ ಆಸ್ಪತ್ರೆಗಳಿವೆ. 591 ಖಾಸಗಿ ಆಸ್ಪತ್ರೆಗಳಿವೆ.

ತುಮಕೂರು ಕೇಂದ್ರ ಸ್ಥಾನದಲ್ಲಿರುವ ಮೂರು ಮೆಡಿಕಲ್ ಕಾಲೇಜುಗಳಿಗೆ ಕೇಂದ್ರ ಸರ್ಕಾರ ಅನುದಾನ ನೀಡಿ ದೆಹಲಿಯಲ್ಲಿರುವ AIIMS ನಂತಹ ಅತ್ಯುನ್ನತ ಗುಣಮಟ್ಟದ ಸಂಶೋಧನಾ ನೆಲೆಯುಳ್ಳ ಆಸ್ಪತ್ರೆಗಳನ್ನು ನಿರ್ಮಾಣ ಮಾಡುವ ಅವಕಾಶವಿದೆ.

ತುಮಕೂರುನಗರವನ್ನು 'ಸ್ಮಾರ್ಟ್ ಸಿಟಿ' ಮಾಡುವ ಯೋಜನೆ ಅನುಷ್ಠಾನದಲ್ಲಿದೆ. ಈ ಯೋಜನೆಯಡಿ ಸ್ಮಾರ್ಟ್ ರಸ್ತೆಗಳು, ಒಳಚರಂಡಿ, ವಿದ್ಯುತ್ ದೀಪ, 24 ಗಂಟೆ ಕುಡಿಯುವ ನೀರು, ಉದ್ಯಾನವನದ ನಿರ್ಮಾಣ ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮುಖ್ಯ ಉದ್ದೇಶ. "ಯಾವ ಕಾಮಗಾರಿಯೂ ನಿರ್ದಿಷ್ಟ ಕಾಲದಲ್ಲಿ ಮುಗಿದಿಲ್ಲ, ಗುಣಮಟ್ಟದಲ್ಲಿ ಏಕರೂಪತೆ ಕಾಯ್ದುಕೊಂಡಿಲ್ಲ" ಎಂದು ಹಿಂದಿನ ಸರ್ಕಾರದ ಜಿಲ್ಲೆಯ ಉಸ್ತುವಾರಿ ಸಚಿವರು ಪ್ರಗತಿ ಪರಿಶೀಲನಾ ಸಭೆಯಲ್ಲಿ ಹೇಳಿದ್ದರು.

ಸ್ಮಾರ್ಟ್ ಯೋಜನೆಯಡಿ ಒಟ್ಟು 53 ಉದ್ಯಾನವನಗಳನ್ನು ಅಭಿವೃದ್ಧಿಪಡಿಸಬೇಕಾಗಿತ್ತು. ಅದರಲ್ಲಿ ನಾಲ್ಕು ಉದ್ಯಾನವನಗಳ ಕಾಮಗಾರಿ ಪೂರ್ಣಗೊಂಡಿದೆ.

ಗ್ರೇಟರ್ ಬೆಂಗಳೂರು ಯೋಜನೆಯಡಿ ತುಮಕೂರು ನಗರವನ್ನು ಸೇರಿಸುವ ಚಿಂತನೆ ನಡೆದಿದೆ. ಅದರ ಭಾಗವಾಗಿ ಮೆಟ್ರೋ ರೈಲ್ವೆ ಯೋಜನೆ ತುಮಕೂರಿಗೆ ಬರಬಹುದು. ಬರಲಿ. ಆದರೆ ತುಮಕೂರನ್ನು ಬೆಂಗಳೂರಿನ ಹೊರವಲಯವಾಗಿ ಪರಿಗಣಿಸಬಾರದು.

ಬೆಂಗಳೂರು ನಗರದ ತ್ಯಾಜ್ಯ ಸುರಿಯುವ 'ಡಂಪಿಂಗ್ ಸ್ಪಾಟ್' ಆಗಿ ತುಮಕೂರು ಜಿಲ್ಲೆ ಪರಿವರ್ತನೆಯಾಗಬಾರದು. ಬೆಂಗಳೂರಿಗೆ ಐ.ಟಿ. ವಲಯದ ತ್ಯಾಜ್ಯದ ನಿರ್ವಹಣೆಯೇ ದೊಡ್ಡ ಸವಾಲು ಆಗಿದೆ. ಅದರ ಪರಿಹಾರವನ್ನು ತುಮಕೂರು ಜಿಲ್ಲೆಯಲ್ಲಿ ಕಾಣಬಾರದು.

2000ನೆಯ ಇಸವಿಯಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯನ್ನು ಮಾಡಿದಾಗ ಅದಕ್ಕೆ 110 ಹಳ್ಳಿಗಳನ್ನು ಸೇರಿಸಲಾಯಿತು. ಒಮ್ಮೆಲೆ ಅಲ್ಲಿನವರು ಬಿ.ಬಿ.ಎಂ.ಪಿ.ಗೆ ಹೆಚ್ಚಿನ ತೆರಿಗೆ ಕಟ್ಟಬೇಕಾಯಿತು. ಈ ತನಕ ಹಳ್ಳಿಗೆ ಕಾವೇರಿ ಕುಡಿಯುವ ನೀರು ದೊರಕಿಲ್ಲ. ಈ ಹಿನ್ನೆಲೆಯಲ್ಲಿ ತುಮಕೂರು ಬೆಂಗಳೂರಿನ ಹೊರವಲಯದ ನಗರವಾಗಬಾರದು ಎನ್ನುವುದು ನನ್ನ ಆಶಯ.

ತುಮಕೂರು ಜಿಲ್ಲೆಗೆ ಭವ್ಯ ಇತಿಹಾಸವಿದೆ. ಸಾಹಿತ್ಯ, ಕಲೆ, ರಂಗಭೂಮಿ, ಕ್ರೀಡೆ ಮೊದಲಾದ ವಿಷಯಗಳಲ್ಲಿ ತುಮಕೂರು ಜಿಲ್ಲೆ ಕರ್ನಾಟಕ ರಾಜ್ಯದಲ್ಲೇ ಪ್ರಸಿದ್ಧಿಯಾಗಿದೆ. ಅನೇಕ ರಾಜಕೀಯ ಮುತ್ಸದ್ದಿಗಳನ್ನು ನಾಡಿಗೆ ಕೊಟ್ಟ ಕೀರ್ತಿ ಸಹ ಈ ಜಿಲ್ಲೆಗಿದೆ. ತುಮಕೂರು ಜಿಲ್ಲೆ ತನ್ನ ಸಾಂಸ್ಕೃತಿಕ ಪರಂಪರೆಗನುಗುಣವಾಗಿ ಬೆಳೆಯಬೇಕು ಎಂಬುದು ಜಿಲ್ಲೆಯ ಸ್ವಾಭಿಮಾನವುಳ್ಳ ಜನರ ಆಶಯವಾಗಿದೆ.

■ ನಿರೂಪಣೆ: ಶ್ರೀವತ್ಸ


**ಪತ್ರಿಕೆಯ ಬಳಗ**

ಸಹಾಯಕ ಸಂಪಾದಕರು: **ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು: **ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು: **ಎನ್.ಭಾರತಿ**

ಸಂಪಾದಕ ಮಂಡಲಿ: **ಡಾ. ಭವಾನಿ ಸ್ಟಾಲಿನ್**, **ಡಾ. ಮನೋಜ್ಞಾ ಎಂ.ಎಚ್**, **ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ**

ಪುಟ ವಿನ್ಯಾಸ: **ಸುಮಾ ಸಾಗರ್**

# ಆಂಟಿಬಯೋಟಿಕ್ಸ್ ಎರಡು ಅಲಗಿನ ಕತ್ತಿ
# ಬಳಕೆಯಲ್ಲಿ ಎಚ್ಚರವಿರಲಿ



■ ಡಾ. ಸೌಮ್ಯ ಕೆ
ಪ್ರಯೋಗಾಲಯ ನಿರ್ದೇಶಕರು,
ಕೇಂದ್ರೀಯ ರೋಗನಿರ್ಣಯ
ಪ್ರಯೋಗಾಲಯ ಸೇವೆಗಳು,
ಪ್ರೊಫೆಸರ್, ಮೈಕ್ರೋಬಯಾಲಜಿ ವಿಭಾಗ


ಪ್ರತಿಜೈವಿಕ (ಆಂಟಿಬಯೋಟಿಕ್ಸ್)ಗಳನ್ನು ಬ್ಯಾಕ್ಟೀರಿಯಾದ ಸೋಂಕಿನ ಚಿಕಿತ್ಸೆಗೆ ಔಷಧಗಳಾಗಿ ಬಳಸುತ್ತೇವೆ. ಪ್ರತಿಜೈವಿಕಗಳ ಯುಗವು ಸುಮಾರು ನೂರು ವರ್ಷಗಳ ಹಿಂದೆ, ಅಂದರೆ 1928ರಲ್ಲಿ ಪೆನಿಸಿಲಿನ್ ಆವಿಷ್ಕಾರದೊಂದಿಗೆ ಪ್ರಾರಂಭವಾಯಿತು. ಪ್ರತಿಜೈವಿಕಗಳ ಬಳಕೆಯು ಸಾಂಕ್ರಾಮಿಕ ರೋಗಗಳ ಚಿಕಿತ್ಸೆಯಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು ಹಾಗೂ ರೋಗದಿಂದ ಸಂಭವಿಸಬಹುದಾಗಿದ್ದ ಶೇಕಡಾ 70ರಷ್ಟು ಸಾವುಗಳು ಕಡಿಮೆಯಾದವು. ಇದು ಮನುಷ್ಯನ ದೀರ್ಘಾಯುಷ್ಯದ ಜೊತೆಗೆ ಜೀವನದ ಗುಣಮಟ್ಟದಲ್ಲಿ ಗಣನೀಯ ಸುಧಾರಣೆಗೂ ಕಾರಣವಾಯಿತು.

1950ರಿಂದ 1970ರ ಅವಧಿಯನ್ನು ಪ್ರತಿಜೈವಿಕಗಳ ಆವಿಷ್ಕಾರದಲ್ಲಿ ಸುವರ್ಣ ಅವಧಿ ಎಂದು ಕರೆಯಲಾಯಿತು. ನಾವು ಬಳಸುವ ಹೆಚ್ಚಿನ ಪ್ರತಿಜೈವಿಕಗಳನ್ನು ಈ ಅವಧಿಯಲ್ಲಿ ಕಂಡುಹಿಡಿಯಲಾಯಿತು. 1980ರ ದಶಕದಿಂದಲೂ ಹೊಸವರ್ಗದ ಪ್ರತಿಜೈವಿಕ ಅಣುಗಳ ಪತ್ತೆ ವಿರಳವಾಗಿದೆ.

ಬ್ಯಾಕ್ಟೀರಿಯಾಗಳು ಬಹುಮುಖ ಜೀವಿಗಳಾಗಿದ್ದು, ನೂತನ ಕಾರ್ಯವಿಧಾನಗಳನ್ನು ಬಳಸಿಕೊಂಡು ತಮ್ಮ ಪರಿಸರಕ್ಕೆ ಪರಿಣಾಮಕಾರಿಯಾಗಿ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಪತ್ತೆಯಾದ ಪ್ರತಿ ಹೊಸ ಪ್ರತಿಜೈವಿಕಗಳನ್ನು ಎದುರಿಸಲು ತಂತ್ರಗಳನ್ನು ವಿಕಸನಗೊಳಿಸಲಾಗಿದೆ ಹಾಗೂ ಅಭಿವೃದ್ಧಿಪಡಿಸಲಾಗಿದೆ.

ಕಾಲಾನಂತರದಲ್ಲಿ ಬ್ಯಾಕ್ಟೀರಿಯಾಗಳು ತಮ್ಮನ್ನು ತಾವು ಮಾರ್ಪಡಿಸಿಕೊಂಡಾಗ ಮತ್ತು ಪ್ರತಿಜೈವಿಕಗಳಿಗೆ ಪ್ರತಿಕ್ರಿಯಿಸದಿದ್ದಾಗ ಪ್ರತಿರೋಧವು ಸಂಭವಿಸುತ್ತದೆ. ಇದು ಪ್ರತಿಜೈವಿಕಗಳ ಬಳಕೆಯ ನೈಸರ್ಗಿಕ ಪರಿಣಾಮವಾಗಿದೆ. ಆದರೆ, ಪ್ರತಿಜೈವಿಕಗಳ ದುರುಪಯೋಗವು ಈ ಪ್ರಕ್ರಿಯೆಯನ್ನು ವೇಗಗೊಳಿಸುತ್ತದೆ. ಆರೋಗ್ಯ ರಕ್ಷಣೆಯ ವ್ಯವಸ್ಥೆ ಮತ್ತು ಸಾಮಾನ್ಯ ಜನಸಂಖ್ಯೆ, ಪಶುಸಂಗೋಪನೆ ಮತ್ತು ಕೃಷಿಯಲ್ಲಿ ಪ್ರತಿಜೈವಿಕಗಳ ಅನುಚಿತ ಬಳಕೆಯು ಅವುಗಳ ನಿರೋಧಕತೆಯನ್ನು ಹೆಚ್ಚಿಸುವ ಪ್ರಮುಖ ಅಂಶಗಳಾಗಿವೆ. ಇದು ಬಡತನ, ಸಾರ್ವಜನಿಕರಲ್ಲಿ ಅರಿವಿನ ಕೊರತೆ, ಶುದ್ಧ ಕುಡಿಯುವ ನೀರು, ಸೌಲಭ್ಯದ ಕೊರತೆ, ಗುಣಮಟ್ಟ ಮತ್ತು ಕೈಗೆಟಕುವ ಆರೋಗ್ಯ ಸವಲತ್ತಿನ ಕೊರತೆ ಮತ್ತು ಸಂಬಂಧಪಟ್ಟ ಆಡಳಿತ ವರ್ಗದಿಂದ ಕಾನೂನು ಜಾರಿಯ ಕೊರತೆಯು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಹೆಚ್ಚು ಪರಿಣಾಮ ಬೀರುತ್ತಿವೆ.

ಮನುಷ್ಯನ ದೇಹವು ಲಕ್ಷಾಂತರ ಬ್ಯಾಕ್ಟೀರಿಯಾಗಳನ್ನು ಹೊಂದಿದೆ. ಇದನ್ನು ಸಾಮಾನ್ಯವಾಗಿ ನಾರ್ಮಲ್ ಫ್ಲೋರಾ ಅಥವಾ ಹ್ಯೂಮನ್ ಮೈಕ್ರೋಬಯೋಮ್ ಎಂದು ಕರೆಯಲಾಗುತ್ತದೆ. ಹ್ಯೂಮನ್ ಮೈಕ್ರೋಬಯೋಮ್ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ನಿರ್ಣಾಯಕವಾಗಿದೆ ಎಂದು ಕಂಡುಬಂದಿದೆ. ಪ್ರತಿಜೈವಿಕಗಳು ರೋಗವನ್ನು ಉಂಟುಮಾಡುವ ಬ್ಯಾಕ್ಟೀರಿಯಾವನ್ನು ಮಾತ್ರ ಕೊಲ್ಲುವುದಿಲ್ಲ. ಇವು ನಾರ್ಮಲ್ ಫ್ಲೋರಾದ ನಡುವೆ ಇರುವ ಜೀವಿಗಳನ್ನೂ ಸಹ ಕೊಲ್ಲುತ್ತವೆ. ಇದು ಪ್ರತಿಜೈವಿಕಗಳ ಉಪಸ್ಥಿತಿಯಿಂದ ಸೃಷ್ಟಿಯಾದ ಒತ್ತಡದಿಂದಾಗಿ ನಿರೋಧಕ ತಳಿಗಳ ಬದುಕುಳಿಯುವಿಕೆಯನ್ನು ಹೆಚ್ಚಿಸುತ್ತದೆ. ಹೀಗೆ ಉಳಿದಿರುವ ನಿರೋಧಕ ಬ್ಯಾಕ್ಟೀರಿಯಾಗಳು ನಂತರ ಅದೇ ವ್ಯಕ್ತಿಯಲ್ಲಿ ಸೋಂಕುಗಳಿಗೆ ಚಿಕಿತ್ಸೆ ನೀಡಲು ಕಷ್ಟವಾಗಲು ಕಾರಣವಾಗಬಹುದು ಅಥವಾ ಅದು ಇತರರಿಗೂ ಹರಡಬಹುದು. ಅಲ್ಲದೆ, ಪ್ರತಿಜೈವಿಕಗಳ ಬಳಕೆಯಿಂದ



**ಮನುಷ್ಯನ ದೇಹವು ಲಕ್ಷಾಂತರ ಬ್ಯಾಕ್ಟೀರಿಯಾಗಳನ್ನು ಹೊಂದಿದೆ. ಇದನ್ನು ಸಾಮಾನ್ಯವಾಗಿ ನಾರ್ಮಲ್ ಫ್ಲೋರಾ ಅಥವಾ ಹ್ಯೂಮನ್ ಮೈಕ್ರೋಬಯೋಮ್ ಎಂದು ಕರೆಯಲಾಗುತ್ತದೆ. ಹ್ಯೂಮನ್ ಮೈಕ್ರೋಬಯೋಮ್ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ನಿರ್ಣಾಯಕವಾಗಿದೆ ಎಂದು ಕಂಡುಬಂದಿದೆ. ಪ್ರತಿಜೈವಿಕಗಳು ರೋಗವನ್ನು ಉಂಟುಮಾಡುವ ಬ್ಯಾಕ್ಟೀರಿಯಾವನ್ನು ಮಾತ್ರ ಕೊಲ್ಲುವುದಿಲ್ಲ. ಇವು ನಾರ್ಮಲ್ ಫ್ಲೋರಾದ ನಡುವೆ ಇರುವ ಜೀವಿಗಳನ್ನೂ ಸಹ ಕೊಲ್ಲುತ್ತವೆ.**


ಉಂಟಾಗುವ ಸೂಕ್ಷ್ಮ ಜೀವಿಗಳಲ್ಲಿನ ಬದಲಾವಣೆಗಳು ಸ್ಥೂಲಕಾಯತೆ, ಉರಿಯೂತದ ಕರುಳಿನ ಕಾಯಿಲೆ, ಅಲರ್ಜಿಯ ಪರಿಸ್ಥಿತಿಗಳು, ಅಸ್ತಮಾ ಮತ್ತು ಮಧುಮೇಹದ ಉಲ್ಬಣಕ್ಕೂ ಕಾರಣವಾಗುತ್ತವೆ ಎಂದು ಹೇಳಲಾಗಿದೆ.

ನಿರೋಧಕ ಜೀವಿಗಳಿಗೆ ಚಿಕಿತ್ಸೆ ನೀಡುವುದು ಕಷ್ಟ ಹಾಗೂ ಹೆಚ್ಚಿನ ಪ್ರಮಾಣದ ಪ್ರತಿಜೈವಿಕಗಳ ಅಗತ್ಯವಿರುತ್ತದೆ. ದೀರ್ಘಾವಧಿಯವರೆಗೆ ಅಥವಾ ಪರ್ಯಾಯ ಔಷಧಗಳ ಬಳಕೆ ಹೆಚ್ಚು ವಿಷಕಾರಿ ಮತ್ತು ದುಬಾರಿ ಆಗಿರುತ್ತವೆ. ಪ್ರತಿಜೈವಿಕ ನಿರೋಧಕತೆಯ ಹೊರಹೊಮ್ಮುವಿಕೆಯು ಸಾಮಾನ್ಯ ಸೋಂಕುಗಳ ಚಿಕಿತ್ಸೆಗೆ ಅಡ್ಡಿಯಾಗುವುದಲ್ಲದೆ, ಸೋಂಕಿನ ಅಪಾಯದಿಂದಾಗಿ ಕ್ಯಾನ್ಸರ್ ಕೀಮೋಥೆರಪಿ, ಅಂಗಾಂಗ ಕಸಿ, ಹಿಪ್ ಬದಲಾವಣೆ ಮತ್ತು ಇತರ ಶಸ್ತ್ರಚಿಕಿತ್ಸೆಗಳು ಸೇರಿದಂತೆ ಜೀವ ಉಳಿಸುವ ಕಾರ್ಯವಿಧಾನಗಳನ್ನು ನಿರ್ವಹಿಸುವ ನಮ್ಮ ಸಾಮರ್ಥ್ಯವನ್ನು ಕುಗ್ಗಿಸಿ ವ್ಯಕ್ತಿಯನ್ನು ಪಾರ್ಶ್ವವಾಯುವಿಗೆ ತಳ್ಳುವಂತೆ ಮಾಡುತ್ತದೆ.

ತಿಳಿದಿರುವ ಬಹುತೇಕ ಎಲ್ಲಾ ಪ್ರತಿಜೈವಿಕಗಳಿಗೆ ನಿರೋಧಕವಾಗಿರುವ ಬ್ಯಾಕ್ಟೀರಿಯಾದ ಸೋಂಕುಗಳ ಏರಿಕೆಯು ಆತಂಕಕಾರಿಯಾಗಿದೆ. ಈ ಹಿಂದೆ ಪರಿಣಾಮಕಾರಿಯಾದ ಅನೇಕ ಪ್ರತಿಜೈವಿಕಗಳು ಅನಗತ್ಯವಾಗಿ ಮಾರ್ಪಟ್ಟಿವೆ. ವೈದ್ಯಕೀಯ ಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲವೇ ಕೆಲವು ಹೊಸ ಪ್ರತಿಜೈವಿಕ (ಆ್ಯಂಟಿಬಯೋಟಿಕ್ಸ್) ಅಣುಗಳ ಆವಿಷ್ಕಾರದ ಸಂಶೋಧನೆಯು ಅಸಮರ್ಪಕವಾಗಿದೆ.

2019ರಲ್ಲಿ ಪ್ರತಿಜೈವಿಕ ನಿರೋಧಕ ಬ್ಯಾಕ್ಟೀರಿಯಾದ ಸೋಂಕಿನ ನೇರ ಪರಿಣಾಮಗಳಿಂದ ಜಾಗತಿಕವಾಗಿ ಸುಮಾರು 1.2 ಮಿಲಿಯನ್ (12 ಲಕ್ಷ) ಜನರು ಮೃತಪಟ್ಟಿದ್ದಾರೆ ಎಂದು ದಿ ಲ್ಯಾನ್ಸೆಟ್ ಪತ್ರಿಕೆ ಪ್ರಕಟಿಸಿದೆ. ಜಾಗತಿಕ ಆರೋಗ್ಯಕ್ಕೆ ಪ್ರಮುಖ ಹತ್ತು ಅಪಾಯಗಳಲ್ಲಿ ಆಂಟಿಮೈಕ್ರೊಬಿಯಲ್ ಸಹ ಒಂದು ಎಂಬುದನ್ನು ವಿಶ್ವ ಆರೋಗ್ಯ ಸಂಸ್ಥೆ ಪಟ್ಟಿ ಮಾಡಿದೆ.

ಪ್ರತಿಜೈವಿಕಗಳ ನಿರೋಧಕತೆಯ ಅಪಾಯವನ್ನು ತಪ್ಪಿಸುವ ತುರ್ತು ಅಗತ್ಯವಿದೆ. ಭಾರತ ಸರ್ಕಾರವು 2012ರಿಂದ 2017ರ ವರೆಗಿನ 12ನೇ ಪಂಚವಾರ್ಷಿಕ ಯೋಜನೆಯಲ್ಲಿ "ನ್ಯಾಷನಲ್ ಪ್ರೋಗ್ರಾಂ ಆನ್ ಆಂಟಿಮೈಕ್ರೊಬಿಯಲ್ ರೆಸಿಸ್ಟೆನ್ಸ್ (ಎಎಂಆರ್) ಕಂಟೈನ್‌ಮೆಂಟ್" ಅನ್ನು ಪ್ರಾರಂಭಿಸಿದೆ. ಈ ಕಾರ್ಯಕ್ರಮದ ಅಂಗವಾಗಿ ಎಎಂಆರ್‌ನ ಕಣ್ಗಾವಲು ಉದ್ದೇಶದಿಂದ ರಾಷ್ಟ್ರೀಯ ರೋಗ ನಿಯಂತ್ರಣದ ಸಂಸ್ಥೆಯೊಂದಿಗೆ ಮಾರ್ಗಸೂಚಿಗಳನ್ನು ರೂಪಿಸುವುದು, ತರಬೇತಿ ನೀಡುವುದು, ಪ್ರಯೋಗಾಲಯಗಳನ್ನು ಬಲವರ್ಧನೆಗೊಳಿಸುವುದು, ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು, ಉದಾಹರಣೆಗೆ ಶಾಲಾಮಕ್ಕಳಿಗೆ ರಸಪ್ರಶ್ನೆಗಳು, ಶಿಕ್ಷಣ ಸಂಸ್ಥೆಗಳಲ್ಲಿ ಸಾರ್ವಜನಿಕರಿಗೆ ಉಪನ್ಯಾಸಗಳು, ರೇಡಿಯೋ ಕಾರ್ಯಕ್ರಮಗಳು ಹಾಗೂ ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದು ಮುಂತಾದುವುಗಳು ನಡೆಯುತ್ತಿವೆ.



ಬ್ಯಾಕ್ಟೀರಿಯಾದ ಪ್ರತಿರೋಧದ ಪ್ರಾರಂಭ ಮತ್ತು ಹರಡುವಿಕೆಯಲ್ಲಿ ಸಾರ್ವಜನಿಕರು ನಿರ್ಣಾಯಕ ಪಾತ್ರ ವಹಿಸುತ್ತಾರೆ. ವೈದ್ಯರ ಸೂಚನೆಯಂತೆ ಆ್ಯಂಟಿಬಯೋಟಿಕ್ ವೇಳಾಪಟ್ಟಿಯ ಸರಿಯಾದ ಅನುಸರಣೆ ಮತ್ತು ಸಾರ್ವಜನಿಕರಿಂದ ಸ್ವಯಂ–ಔಷಧಿಗಳಲ್ಲಿ ತೊಡಗಿಸಿಕೊಳ್ಳದಿರುವುದು ಮತ್ತು ಪ್ರತಿಜೈವಿಕ ನಿರೋಧಕತೆಯನ್ನು ನಿಗ್ರಹಿಸುವಲ್ಲಿ ಬಹಳ ದೂರ ಸಾಗುತ್ತದೆ. 2011ರಲ್ಲಿ ಭಾರತ ಸರ್ಕಾರವು ಪ್ರತಿಜೈವಿಕಗಳ ಕೌಂಟರ್ ಮಾರಾಟದ ಮೇಲೆ ಸೀಮಿತಗೊಳಿಸುವ ಹೆಚ್1 ನಿಯಮವನ್ನು ಪರಿಚಯಿಸಿತು. ಆದಾಗ್ಯೂ ಸಹ, ಈ ನಿಯಮದ ಅನುಷ್ಠಾನವು ಹಲವಾರು ಸವಾಲುಗಳನ್ನು ಎದುರಿಸಿತು ಹಾಗೂ ಅನಂತರ ಅದನ್ನು ಮಾರ್ಪಡಿಸಲಾಯಿತು.



ಕೇರಳ ಸರ್ಕಾರವು ಇತ್ತೀಚೆಗೆ ಆಪರೇಷನ್ ಅಮೃತ್ (ಆಂಟಿಮೈಕ್ರೊಬಿಯಲ್ ರೆಸಿಸ್ಟೆನ್ಸ್ ಇಂಟರ್ವೆನ್ಷನ್ ಫಾರ್ ಟೋಟಲ್ ಹೆಲ್ತ್) ಅನ್ನು ಪ್ರಾರಂಭಿಸಿದೆ. ಇದು ವೈದ್ಯರ ಪ್ರಿಸ್ಕ್ರಿಪ್ಷನ್(ಸಲಹಾ ಚೀಟಿ) ಇಲ್ಲದೆ ಪ್ರತಿಜೈವಿಕಗಳ ಮಾರಾಟವನ್ನು ನಿರ್ಬಂಧಿಸುವ ಹೆಚ್1 ನಿಯಮವನ್ನು ಪುನಃ ಜಾರಿಗೊಳಿಸಿದೆ.

ಈ ಲೇಖನದ ಲೇಖಕರು ನಡೆಸಿದ ಅಧ್ಯಯನವು ಕರ್ನಾಟಕದ ಸಾಮಾನ್ಯ ಜನರಲ್ಲಿ ಪ್ರತಿಜೈವಿಕ ಬಳಕೆ ಮತ್ತು ಪ್ರತಿರೋಧದ ಬಗೆಗೆ ಇರುವ ತಿಳುವಳಿಕೆ ಸರಾಸರಿ ಮಾತ್ರ ಎಂದು ತೋರಿಸಿದೆ. ಆದ್ದರಿಂದ, ಪ್ರತಿಜೈವಿಕಗಳ ಸರಿಯಾದ ಸೂಚನೆ ಮತ್ತು ಬಳಕೆಯ ಬಗ್ಗೆ ಮತ್ತು ದುರುಪಯೋಗದ ಪರಿಣಾಮಗಳ ಬಗ್ಗೆ ಸಾಮಾನ್ಯ ಜನರಿಗೆ ಶಿಕ್ಷಣ ನೀಡಲು ದೃಢ ಪ್ರಯತ್ನಗಳನ್ನು ಮಾಡಬೇಕಾಗಿದೆ. ಪ್ರತಿಯೊಬ್ಬ ಆರೋಗ್ಯ ರಕ್ಷಣಾ ಕಾರ್ಯಕರ್ತರೂ ರೋಗಿ ಅಥವಾ ಸಾರ್ವಜನಿಕರೊಂದಿಗಿನ ಯಾವುದೇ ಭೇಟಿಯನ್ನು ಸೂಕ್ತ ಪ್ರತಿಜೈವಿಕ ಬಳಕೆಯ ಬಗ್ಗೆ ಶಿಕ್ಷಣ ನೀಡುವ ಅವಕಾಶವಾಗಿ ಬಳಸಿಕೊಳ್ಳಬೇಕು. ಪ್ರಿಸ್ಕ್ರಿಪ್ಷನ್ ಇಲ್ಲದೆ ಆಂಟಿಬಯೋಟಿಕ್‌ಗಳ ಮಾರಾಟ ಮಾಡುವುದರ ವಿರುದ್ಧ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಅದೇ ಸಮಯದಲ್ಲಿ, ಶಿಫಾರಸು ಮಾಡುವ ವೈದ್ಯರು ತರ್ಕಬದ್ಧವಾದ ಪ್ರತಿಜೈವಿಕ ಪ್ರಿಸ್ಕ್ರಿಪ್ಷನ್ ಅಭ್ಯಾಸಗಳನ್ನು ಅನುಸರಿಸುವುದು ಮುಖ್ಯವಾಗಿದೆ. ಆರೋಗ್ಯ ರಕ್ಷಣಾ ವ್ಯವಸ್ಥೆಯು ಸೋಂಕುಗಳ ಚಿಕಿತ್ಸೆಗಾಗಿ ಮಾತ್ರವಲ್ಲದೆ ಅದರ ತಡೆಗಟ್ಟುವಿಕೆಗೂ ಸಹ ಪ್ರತಿಜೈವಿಕಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಆದ್ದರಿಂದ ನಾವು ಲಭ್ಯವಿರುವ ಪ್ರತಿಜೈವಿಕ(ಆಂಟಿಬಯೋಟಿಕ್)ಗಳನ್ನು ವಿವೇಚನಾಶೀಲವಾಗಿ ಬಳಸುವ ಮೂಲಕ ಸಂರಕ್ಷಿಸಬೇಕಿದೆ. ತುರ್ತುಕ್ರಮಗಳ ಕೊರತೆಯು ಪ್ರತಿಜೈವಿಕಗಳ ನಂತರದ ಯುಗವನ್ನು ತರಬಹುದು. ಅರ್ಥಾತ್ ಇಲ್ಲಿಯವರೆಗೆ ಸುಲಭವಾಗಿ ಚಿಕಿತ್ಸೆ ನೀಡಬಹುದಾದ ಸೋಂಕುಗಳು ಪ್ರಾಣಕ್ಕೆ ಸಂಚಕಾರ ತಂದೊಡ್ಡಬಹುದು.

■ ಕನ್ನಡಕ್ಕೆ: ಬಿ.ಎಂ.ಸುನೀತಾ

# ಎಂ.ಜಿ.ರಸ್ತೆಯ ಶ್ರೀದೇವಿ ಆಸ್ಪತೆಯಲ್ಲಿ
# ಅನ್ನನಾಳದ ಕ್ಯಾನ್ಸರ್‌ನ ಶಸ್ತ್ರಚಿಕಿತ್ಸೆ

## ಕಾಯಿಲೆಯ ಸ್ವರೂಪ

ಗಂಟಲಿನಿಂದ ಜಠರದವರೆಗೆ ಅನ್ನನಾಳವಿರುತ್ತದೆ. ಮನುಷ್ಯರು ಸೇವಿಸುವ ಆಹಾರವನ್ನು ಜಠರಕ್ಕೆ ಸಾಗಿಸುವ ಕೆಲಸವನ್ನು ಅನ್ನನಾಳ ಮಾಡುತ್ತದೆ. ಅನ್ನನಾಳ ಮೂಲಕ ತೆಗೆದುಕೊಂಡ ಆಹಾರವು ಜಠರಕ್ಕೆ ಹೋಗಿ ಅಲ್ಲಿಂದ ಪಚನಕ್ರಿಯೆ ಪ್ರಾರಂಭವಾಗುತ್ತದೆ. ಅನ್ನನಾಳದ ಕ್ಯಾನ್ಸರ್ ಎನ್ನುವುದು ಒಂದು ರೀತಿಯ ಅಸ್ವಸ್ಥತೆಯಾಗಿರುತ್ತದೆ. ಆರೋಗ್ಯಕರ ಕೋಶಗಳು ಅನ್ನನಾಳದಲ್ಲಿ ನಿಯಂತ್ರಣವಿಲ್ಲದೆ 'ದ್ರವ್ಯರಾಶಿ'(ಟ್ಯೂಮರ್) ಬೆಳೆದಾಗ ರೂಪಗೊಳ್ಳುತ್ತದೆ.

ಅನ್ನನಾಳದಲ್ಲಿ ದುರ್ಮಾಂಸ ಅಥವಾ ಗೆಡ್ಡೆ ಬೆಳೆದು ಆಹಾರ ಹೋಗಲು ಅಡಚಣೆಯಾಗುತ್ತದೆ. ಆಗ ಎದೆಯುರಿಯ ಲಕ್ಷಣ ಕಂಡುಬರುತ್ತದೆ. ಧ್ವನಿಯಲ್ಲಿ ಬದಲಾವಣೆಯಾಗುತ್ತದೆ. ಗಂಟಲು ನೋವು ಕಂಡುಬರುತ್ತದೆ. ಪ್ರಾರಂಭದಲ್ಲಿ ಘನ ಆಹಾರವನ್ನು ತೆಗೆದುಕೊಳ್ಳಲು ಕಷ್ಟವಾಗುತ್ತದೆ. ಅನಂತರ ದ್ರವಪದಾರ್ಥದ ಆಹಾರವನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಹಸಿವು ಆಗುವುದಿಲ್ಲ. ಪಚನಕ್ರಿಯೆ ಸರಿಯಾಗಿರುವುದಿಲ್ಲ. ಕೆಮ್ಮು ಮತ್ತು ವಾಂತಿ ಸಹ ಆಗುತ್ತದೆ.

ಕ್ಯಾನ್ಸರ್ ಕುರಿತು ನಡೆದಿರುವ ಸಂಶೋಧನೆಗಳ ಪ್ರಕಾರ ಕ್ಯಾನ್ಸರ್‌ನ್ನು ಬೇಗ ಪತ್ತೆ ಹಚ್ಚಿದರೆ ಬಾಧಿತರು ಬದುಕುಳಿಯುವ ಸಾಧ್ಯತೆ ನಾಲ್ಕು ಪಟ್ಟು ಹೆಚ್ಚಿರುತ್ತದೆ. ಅತಿಯಾದ ಕಾಫಿ ಸೇವನೆ, ಮಸಾಲೆಯುಕ್ತ ಆಹಾರ, ಧೂಮಪಾನ, ಮದ್ಯಪಾನ, ಅತಿಯಾದ ಬೊಜ್ಜು ಮತ್ತು ದಿಢೀರನೆ ತೂಕದಲ್ಲಿ ಇಳಿಮುಖ ಹಾಗೂ ಜಠರದಿಂದ ರಾಸಾಯಿನಿಕಗಳು ಅನ್ನನಾಳಕ್ಕೆ ಬರುವುದು (G.R.D.S)ಸಹ ಅನ್ನನಾಳದ ಕ್ಯಾನ್ಸರ್‌ಗೆ ಕಾರಣವಾಗಬಹುದು.

ಹಿಂದೆ ಕ್ಯಾನ್ಸರ್ ಪರೀಕ್ಷೆ ಮಾಡಲು ಬೇರಿಯಮ್ ಸ್ವಾಲೋ ಎಕ್ಸ್‌ರೇ ಪದ್ದತಿಯನ್ನು ಅನುಸರಿಸುತ್ತಿದ್ದರು. ಈಗ ಎಂಡೋಸ್ಕೋಪಿ ಮಾಡಿ ಹುಣ್ಣಿನ ಅಥವಾ ಗೆಡ್ಡೆಯಲ್ಲಿನ 'ಟಿಷ್ಯುವನ್ನು ತೆಗೆದುಕೊಂಡು ಬಯಾಪ್ಸಿಗೆ ಕಳುಹಿಸುತ್ತಾರೆ. ಅನ್ನನಾಳದ ಗೆಡ್ಡೆಯ ಸ್ವರೂಪವೇನು? ಅದು ಕ್ಯಾನ್ಸರ್ ಲಕ್ಷಣ ಹೊಂದಿದೆಯೇ ಎಂಬುದು ಬಯಾಪ್ಸಿಯಿಂದ ತಿಳಿಯುತ್ತದೆ. ನಂತರ ಸಿ.ಟಿ. ಸ್ಕಾನ್ ಅಥವಾ ಎಂ.ಆರ್.ಐ.ಗಳನ್ನು ಮಾಡಿದಾಗ ಕ್ಯಾನ್ಸರ್ ಗಾತ್ರ ಹಾಗು ಅದು ಯಾವ ಭಾಗಕ್ಕೆ ಹರಡಿದೆಂಬುದು ತಿಳಿಯುತ್ತದೆ.


## ಕ್ಯಾನ್ಸರ್ ವಿಧ

ಅನ್ನನಾಳದ ಕ್ಯಾನ್ಸರ್‌ನಲ್ಲಿ ಎರಡು ವಿಧವಿದೆ. ಅವುಗಳೆಂದರೆ

- **ಸ್ಕ್ವಾಮಸ್ ಸೆಲ್ ಕಾರ್ಸಿನೋಮ:** ಸಾಮಾನ್ಯವಾಗಿ ಸ್ಕ್ವಾಮಸ್ ಕೋಶಗಳು ಅನ್ನನಾಳದ ಮೇಲಿನ ಮತ್ತು ಮಧ್ಯಭಾಗದಲ್ಲಿ ಪ್ರಾರಂಭವಾಗುತ್ತದೆ.
- **ಅಡೆನೊಕಾರ್ಸಿನೋಮ:** ಅನ್ನನಾಳದ ಕೆಳಭಾಗ ಮತ್ತು ಜಠರದ ಸಂಧಿಯಲ್ಲಿ ಹುಟ್ಟುತ್ತದೆ.

## ಚಿಕಿತ್ಸೆ

ಅನ್ನನಾಳದ ಕ್ಯಾನ್ಸರ್‌ಗೆ ನೀಡುವ ಚಿಕಿತ್ಸೆ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುತ್ತದೆ. ವೈದ್ಯರು ಹೊಸ ಸಂಶೋಧನೆ ಮತ್ತು ವೈದ್ಯಕೀಯ ಉಪಕರಣಗಳನ್ನು ತಮ್ಮ ಚಿಕಿತ್ಸೆಗೆ ಬಳಸುತ್ತಾರೆ. ಕ್ಯಾನ್ಸರ್‌ನ ಚಿಕಿತ್ಸೆ ರೋಗಿಗೆ ಆ ಕಾಯಿಲೆ ಯಾವು ಹಂತದಲ್ಲಿದೆ, ರೋಗಿಯ ಆರೋಗ್ಯದ ಮೇಲೆ ಚಿಕಿತ್ಸೆ ಬೀರುವ ಪ್ರಭಾವವನ್ನು ವೈದ್ಯರು ಅಧ್ಯಯನ ಮಾಡುತ್ತಾರೆ. ಸಾಮಾನ್ಯವಾಗಿ ಗೆಡ್ಡೆ ದೊಡ್ಡ ಪ್ರಮಾಣದಲ್ಲಿ ಬೆಳೆದ ನಂತರ ಮತ್ತು ವಿವಿಧ ಭಾಗಗಳಿಗೆ ಹರಡಿದ ನಂತರ ಕ್ಯಾನ್ಸರ್ ರೋಗನಿರ್ಣಯ ಸಂಭವಿಸುತ್ತದೆ. ಇತರ ಚಿಕಿತ್ಸೆಗಳು ಅನ್ನನಾಳದಲ್ಲಿ ಗೆಡ್ಡೆ ಕುಗ್ಗಿಸುವ ಮತ್ತು ದೇಹದ ಇತರ ಭಾಗಗಳಿಗೆ ವಿಸ್ತರಿಸದಿದ್ದರೆ ಅದನ್ನು ತೆಗೆದು ಹಾಕುವ ಶಸ್ತ್ರಚಿಕಿತ್ಸೆಯನ್ನು



ಜೀರ್ಣಾಂಗ, ಅನ್ನನಾಳವನ್ನು ಕೆಂಪು ಬಣ್ಣದಲ್ಲಿ ಗುರುತಿಸಲಾಗಿದೆ.

ಅನುಸರಿಸಲಾಗುತ್ತದೆ. ಈ ರೀತಿಯ ಕೆಲವು ಚಿಕಿತ್ಸಾ ಪದ್ದತಿಗಳನ್ನು ರೂಢಿಯಲ್ಲಿವೆ.


- **ಶಸ್ತ್ರಚಿಕಿತ್ಸೆ:** ಈ ವಿಧಾನದಲ್ಲಿ ಅನ್ನನಾಳದ ಪೀಡಿತಭಾಗವನ್ನು ತೆಗೆದು ಹಾಕಲಾಗುವುದು. ಅಥವಾ ಅನ್ನನಾಳದಲ್ಲಿರುವ ಗೆಡ್ಡೆಯನ್ನು ತೆಗೆದುಹಾಕಲಾಗುವುದು. ಅನ್ನನಾಳವನ್ನೇ ತೆಗೆದುಹಾಕಿ 'ಟ್ಯೂಬ್' ತರಹ ಜಠರ ಅಥವಾ ಸಣ್ಣಕರುಳಿನ ಅಂಗಾಂಶದಿಂದ ಮರುನಿರ್ಮಾಣ ಮಾಡಲಾಗುವುದು.
- **ಕೀಮೋಥೆರಪಿ ಮತ್ತು ವಿಕಿರಣ:** ಈ ವಿಧಾನದಲ್ಲಿ ಔಷಧಗಳು ಮತ್ತು ಬಾಹ್ಯ ಕಿರಣದ ವಿಕಿರಣಕ್ಕೆ ಒಡ್ಡಿಕೊಳ್ಳುವುದರಿಂದ ಗೆಡ್ಡೆ ಕುಗ್ಗುತ್ತದೆ. ಪೀಡಿತಭಾಗದಿಂದ ಸುತ್ತುವರಿದ ಕೆಲವು ಆರೋಗ್ಯಕರ ಕೋಶಗಳು ಸಹ ಹಾನಿಗೊಳಗಾಗುತ್ತವೆ. ಈ ಚಿಕಿತ್ಸೆಯಿಂದ ರೋಗಿಗೆ ಕೂದಲು ಉದುರುತ್ತದೆ. ವಾಕರಿಕೆ, ವಾಂತಿ, ನೋವು ಮೊದಲಾದ ಅಡ್ಡ ಪರಿಣಾಮಗಳಾಗುತ್ತವೆ.
- **ಉದ್ದೇಶಿತ ಚಿಕಿತ್ಸೆ:** ಈ ಚಿಕಿತ್ಸಾ ಯೋಜನೆ ಕ್ಯಾನ್ಸರ್ ಹೋರಾಟದ ಔಷಧಿಗಳನ್ನು ಹೊಂದಿರುತ್ತದೆ. ಇದು ಗೆಡ್ಡೆಯ ಬೆಳವಣಿಗೆಯನ್ನು ನಿಯಂತ್ರಿಸುವ ಗುರಿಯನ್ನು ಹೊಂದಿರುತ್ತದೆ. ಫೋಟೋ-ಡೈನಾಮಿಕ್ ಥೆರಪಿ ಮತ್ತು ಎಂಡೋಸ್ಕೋಪಿಕ್ ಥೆರಪಿ ಅನ್ನನಾಳದ ಕ್ಯಾನ್ಸರ್‌ಗೆ ಕೆಲಸ ಮಾಡುವ ಇತರೆ ಚಿಕಿತ್ಸೆಗಳಾಗಿವೆ.

## ಕ್ಯಾನ್ಸರ್‌ನ ಭೀಕರತೆ

ಕ್ಯಾನ್ಸರ್‌ಗಳಲ್ಲಿ 'ಅನ್ನನಾಳದ ಕ್ಯಾನ್ಸರ್'ಗೆ ವಿಶ್ವದಲ್ಲಿ ಎಂಟನೆಯ ಸ್ಥಾನವಿದೆ. ಪ್ರತಿವರ್ಷ 4.56.000 ಜನರಿಗೆ ಅನ್ನನಾಳದ ಕ್ಯಾನ್ಸರ್ ಪತ್ತೆಯಾಗುತ್ತಿದೆ ಎಂದು ವರದಿ ಹೇಳುತ್ತದೆ. ಭಾರತದಲ್ಲಿ ವಿವಿಧ ಕಾಯಿಲೆಗಳಿಂದ ಮರಣ ಹೊಂದುವವರ ಪೈಕಿ ಕ್ಯಾನ್ಸರ್‌ಗೆ ನಾಲ್ಕನೆಯ ಸ್ಥಾನವಿದೆ. ಇದು ಪ್ರಪಂಚದ ದೃಷ್ಟಿಯಿಂದ ಅಧಿಕ ಸಂಖ್ಯೆಯೆಂದೇ ಹೇಳಬೇಕು. ಭಾರತದಲ್ಲಿ ಸ್ಕಾಮಸ್ ಸೆಲ್‌ಕಾರ್ನಿನೋಮನಿದಿಂದ ಮರಣ ಹೊಂದವವರ ಸಂಖ್ಯೆ ಹೆಚ್ಚಿದೆ. ಪ್ರತಿವರ್ಷ ಭಾರತದಲ್ಲಿ 47 ಸಾವಿರದಷ್ಟು ಅನ್ನನಾಳದ ಕ್ಯಾನ್ಸರ್ ಪತ್ತೆಯಾಗುತ್ತದೆ. ಸುಮಾರು 42 ಸಾವಿರದಷ್ಟು ಜನ ಕ್ಯಾನ್ಸರ್‌ನಿಂದ ಮರಣ ಹೊಂದುತ್ತಾರೆ. ಅನ್ನನಾಳದ ಕ್ಯಾನ್ಸರ್‌ಗೆ ಧೂಮಪಾನ ಮತ್ತು ತಂಬಾಕು ಪ್ರಮುಖ ಕಾರಣಗಳೆಂದು ಹೇಳಲಾಗಿದೆ.

## ಶ್ರೀದೇವಿ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಶಸ್ತ್ರಚಿಕಿತ್ಸೆ

ತುಮಕೂರಿನ ಎಂ.ಜಿ.ರಸ್ತೆಯಲ್ಲಿರುವ ಶ್ರೀದೇವಿ ಆಸ್ಪತ್ರೆಯಲ್ಲಿ ಅನ್ನನಾಳ ಕ್ಯಾನ್ಸರ್‌ಗೆ ಸಂಬಂಧಪಟ್ಟಂತೆ ಅಪರೂಪದ ಶಸ್ತ್ರಚಿಕಿತ್ಸೆಯೊಂದು ನಡೆದಿದೆ. ಇದನ್ನು ಶ್ರೀದೇವಿ ಆಸ್ಪತ್ರೆಯ ನಿರ್ದೇಶಕರಾದ ಡಾ.ಎಂ.ಹೆಚ್. ಮನೋನ್ಮಣಿ ನೆರವೇರಿಸಿದ್ದಾರೆ. ವೈದ್ಯಕೀಯ




ಲೋಕದ ಅಪರೂಪದ ಆಪರೇಷನ್ ಎಂದೇ ಹೇಳಬಹುದು. ಅದನ್ನು ವೈದ್ಯಕೀಯ ಭಾಷೆಯಲ್ಲಿ Trance Hital Oesophagectomy with Cervical anastomosis ಎನ್ನುತ್ತಾರೆ.

ಶ್ರೀದೇವಿ ಆಸ್ಪತ್ರೆಯ ನಿರ್ದೇಶಕರ ಬಳಿ 45 ವರ್ಷದ ಮಹಿಳಾ ಪೇಶೆಂಟ್‌ರೊಬ್ಬರು ತಮಗೆ ಆಹಾರ ನುಂಗಲು ತೊಂದರೆ ಎಂದು ಬಂದಿದ್ದರು. ಅವರಿಗೆ ಬಹಳ ದಿನಗಳಿಂದ ಎದೆಯಲ್ಲಿ ಉರಿ ಕಂಡು ಬರುತ್ತಿತ್ತು . ಧ್ವನಿಯಲ್ಲಿ ಬದಲಾವಣೆಯಾಗಿತ್ತು. ಗಂಟಲು ನೋವಿತ್ತು. ಆಹಾರ ನುಂಗುವಾಗ ತೊಂದರೆಯಾಗುತ್ತಿತ್ತು. ವಾಂತಿಯಾಗುತ್ತಿತ್ತು. ಸರಿಯಾಗಿ ಆಹಾರ ತೆಗೆದುಕೊಳ್ಳದ ಕಾರಣ ಅವರಿಗೆ ಆರೋಗ್ಯದ ಸಮಸ್ಯೆಗಳಿದ್ದವು. ಪರೀಕ್ಷೆ ಮಾಡಿದಾಗ ಅನ್ನನಾಳದಲ್ಲಿ ಆಹಾರ ಜಠರಕ್ಕೆ ಹೋಗಲು ತೊಂದರೆಯಿದೆ ಎನ್ನುವುದು ಗೊತ್ತಾಯಿತು. ಎಂಡೋಸ್ಕೊಪಿ ಮಾಡಿ ಮಾದರಿಯನ್ನು ತೆಗೆದು ಬಯಾಪ್ಸಿಗೆ ಕಳುಹಿಸಲಾಯಿತು. ನಂತರ ಸಿ.ಟಿ.ಸ್ಕಾನ್ ಮಾಡಲಾಯಿತು.

ಎಲ್ಲಾ ಪರೀಕ್ಷೆಗಳ ನಂತರ ಅವರಿಗೆ ಅನ್ನನಾಳದ ಕ್ಯಾನ್ಸರ್‌ಯಿರುವುದು ದೃಢವಾಯಿತು. ಕ್ಯಾನ್ಸರ್ ಬೇರೆ ಕಡೆ ಹರಡಿದೆಯೇ ಎಂಬುದನ್ನು ಅಥವಾ ಇಲ್ಲವೇ ಎಂಬುದನ್ನು ಪರೀಕ್ಷೆಯ ಮೂಲಕ ತಿಳಿದುಕೊಳ್ಳಲಾಯಿತು

ಡಾ.ಎಂ.ಎಚ್. ಮನೋನ್ಮಣಿ ಶಸ್ತ್ರಚಿಕಿತ್ಸೆಯ ಮೂಲಕ ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕಲು ನಿರ್ಧಾರ ಮಾಡಿದರು. ಆಪರೇಷನ್‌ಗೆ ಮುಂಚೆ ರೋಗಿಗೆ ಎಲ್ಲಾ ತರಹದ ಪರೀಕ್ಷೆಗಳನ್ನು ಮಾಡಲಾಯಿತು. ಸಾಮಾನ್ಯವಾಗಿ ಅನ್ನನಾಳ 25 ಇಂಚು ಉದ್ದವಿರುತ್ತದೆ. ಅದನ್ನು ಮೂರು ವಿಧವಾಗಿ ವಿಂಗಡಿಸುತ್ತಾರೆ. ಯಾವ ಭಾಗಕ್ಕೆ ಕ್ಯಾನ್ಸರ್ ಹಬ್ಬಿದೆ ಎನ್ನುವುದರ ಮೇಲೆ ಅದರ ತೀವ್ರತೆಯನ್ನು ಅಳೆಯುತ್ತಾರೆ. ಆ ಮೂರು ಭಾಗಗಳು ಹೀಗಿವೆ. 1. Pars Cervicalis 2. Pars thoracica 3 Pars abdominacis



ಸಿ.ಟಿ. ಪರೀಕ್ಷೆ ಮಾಡಿದಾಗ ಗೆಡ್ಡೆಯ ಪ್ರಮಾಣ ತಿಳಿಯಿತು. ಮೇಲಿನ ಮೂರು ಹಂತದಲ್ಲಿ ಯಾವ ಭಾಗದಲ್ಲಿ ಗೆಡ್ಡೆ ಅಥವಾ ದುರ್ಮಾಂಸ ಬೆಳೆದಿದೆಂಬುದರ ಮೇಲೆ ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಮೊದಲು ಕಿಮೋಥೆರಪಿ ನೀಡಿ ಗೆಡ್ಡೆ ಗಾತ್ರವನ್ನು ಸಣ್ಣದು ಮಾಡಿಕೊಂಡು ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದು ಹಾಕುತ್ತಾರೆ.

ಇಲ್ಲಿ ವೈದ್ಯರು ತೆರೆದ ಶಸ್ತ್ರಚಿಕಿತ್ಸೆಯನ್ನು ಆಯ್ಕೆ ಮಾಡಿಕೊಂಡರು. ಪೇಶೆಂಟ್‌ಗೆ ಹೆಚ್ಚಿನ ತ್ರಾಸವಾಗದೇ ಆಪರೇಷನ್ ಮುಗಿಸಿದರು. ಆಪರೇಷನ್‌ಗೆ ಐದು ಘಂಟೆಗಳಷ್ಟು ದೀರ್ಘ ಅವಧಿ ಬೇಕಾಯಿತು.

ಅನ್ನನಾಳವನ್ನು ಸಂಪೂರ್ಣವಾಗಿ ತೆಗೆದು ಹಾಕಿ ಜಠರದ ಸ್ವರೂಪವನ್ನು ಬದಲಾಯಿಸಿಕೊಂಡು ಅದನ್ನೇ 'ಟ್ಯೂಬ್' ತರಹ ಮಾಡಿ ಗಂಟಲಿಗೆ ಸೇರಿಸಿದರು. ಈಗ ಪೇಶೆಂಟ್ ತೆಗೆದುಕೊಳ್ಳುವ ಆಹಾರ ನೇರವಾಗಿ ಜಠರವನ್ನು ತಲುಪುತ್ತದೆ. ಆಹಾರ ಜಠರಕ್ಕೆ ಬರಲು ಅನ್ನನಾಳವಿರುವುದಿಲ್ಲ.

ಪೇಶೆಂಟ್‌ಗೆ ಆಪರೇಷನ್ ಆದ ಪ್ರಾರಂಭದಲ್ಲಿ ಮೊದಲಿಗೆ ದ್ರವ ಪದಾರ್ಥಗಳನ್ನು ಕೊಡಲಾಯಿತು. ಸ್ವಲ್ಪ ದಿನದ ನಂತರ ಗಟ್ಟಿ ಆಹಾರವನ್ನು ಕೊಡಲಾಯಿತು. ಪೇಶೆಂಟ್ ಸುಲಭವಾಗಿ ಆಹಾರ ತೆಗೆದುಕೊಂಡರು. ನಿದಾನವಾಗಿ ಗುಣಮುಖರಾದರು.

ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ಅವರಿಗೆ ಕೆಲವು ಸಲಹೆಗಳನ್ನು ವೈದ್ಯರು ನೀಡಿದರು. ಅವರು ತಮ್ಮ ಜೀವನ ಶೈಲಿ ಬದಲಾಯಿಸಿಕೊಳ್ಳಬೇಕು. ಇನ್ನು ಮುಂದೆ ಅವರು ಒಮ್ಮೇಲೆ ಹೆಚ್ಚು ಆಹಾಯ ತೆಗೆದುಕೊಳ್ಳುವಂತಿಲ್ಲ. ಮಲಗುವಾಗ ಎರಡು ದಿಂಬುಗಳನ್ನು ಬಳಸಬೇಕಾಗುತ್ತದೆ.




## ವೃತ್ತಿಯಲ್ಲಿ ಸಂತೃಪ್ತಿ ಕಾಣುವ ವೈದ್ಯೆ

ಡಾ.ಎಂ.ಎಚ್. ಮನೋನ್ಮಣಿ ತಮ್ಮ ವೃತಿಯನ್ನು ಗಂಭೀರವಾಗಿ ತೆಗೆದುಕೊಂಡು ಅದಕ್ಕೆ ತಮ್ಮನ್ನು ಅರ್ಪಿಸಿಕೊಂಡಿರುವ ಬದ್ಧತೆಯುಳ್ಳ ವೈದ್ಯೆ. ಬೆಂಗಳೂರಿನ ಎಂ.ಎಸ್. ರಾಮಯ್ಯ ಕಾಲೇಜ್‌ನಲ್ಲಿ ಎಂ.ಬಿ.ಬಿ.ಎಸ್. ಪದವಿ ಪಡೆದು, ಜನರಲ್ ಸರ್ಜರಿಯಲ್ಲಿ ಎಂ.ಎಸ್. ಮಾಡಲು ಮಂಗಳೂರಿನ ಕಸ್ತೂರಿಬಾ ಮೆಡಿಕಲ್ ಕಾಲೇಜ್‌ಗೆ ಸೇರ್ಪಡೆಯಾಗುತ್ತಾರೆ. ಅನಂತರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 'ಸರ್ಜಜಿಕಲ್ ಗ್ಯಾಸ್ಟ್ರೋ ಎಂಟರಾಲಜಿಯಲ್ಲಿ' ಉನ್ನತ ಶಿಕ್ಷಣ ಪಡೆಯಲು ಎರಡುವರ್ಷದ ಫೆಲೋಶಿಫ್ ದೊರೆಯುತ್ತದೆ. ಅಲ್ಲಿ ಇವರಿಗೆ ಈ ಕ್ಷೇತ್ರದಲ್ಲಿ ಅದ್ವಿತೀಯರಾದ ಡಾ. ಎನ್. ಎಸ್.ನಾಗೇಶ್ ಮತ್ತು ಡಾ.ಕೆ.ವಿ.ಅಶೋಕಕುಮಾರ್ ಅವರ ಮಾರ್ಗದರ್ಶನ ದೊರೆಯುತ್ತದೆ. ಕ್ಯಾನ್ಸರ್‌ಗೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆಯಲ್ಲಿ ತಜ್ಞತೆ ಪಡೆಯಲು ಡಾ. ಮನೋನ್ಮಣಿ ಅವರು ತಮ್ಮ ಪ್ರಯತ್ನ ಮುಂದುವರಿಸಿದ್ದಾರೆ. ಇದರ ಜೊತೆಗೆ ಅವರು ಎಂಡೋಸ್ಕೊಪಿ, ಲೆಪ್ರೋಸ್ಕೋಪಿ, ಕೊಲೊನೋಸ್ಕೊಪಿ ಮತ್ತು ಎಂಡೋಸ್ಕೊಪಿಕ್ ಇ.ಆರ್.ಸಿ.ಪಿ. ಶಸ್ತ್ರಚಿಕಿತ್ಸೆಗಳನ್ನು ಮಾಡುತ್ತಿದ್ದಾರೆ. ಪ್ರಾಂಕ್ರಿಯಾಸ್ ಕ್ಯಾನ್ಸರ್‌ಗೆ ಚಿಕಿತ್ಸೆ ಮಾಡುವುದರಲ್ಲೂ ಡಾ. ಮನೋನ್ಮಣಿ ಅವರು ಪ್ರಾವೀಣ್ಯತೆ ಸಾಧಿಸಿದ್ದಾರೆ.

ಡಾ. ಮನೋನ್ಮಣಿ ಅವರು 2014ರಿಂದಲೂ ಶ್ರೀದೇವಿ ವೈದ್ಯಕೀಯ ಕಾಲೇಜಿನ ಸರ್ಜರಿ ವಿಭಾಗದಲ್ಲಿ ಬೋಧಕರಾಗಿ ಕೆಲಸ ಮಾಡುತ್ತಿದ್ದಾರೆ. ಈಗವರು ಸರ್ಜರಿಯ ವಿಭಾಗದಲ್ಲಿ ಪ್ರಾಧ್ಯಾಪಕರು. ನಿರಂತರವಾಗಿ ತಮ್ಮನ್ನು ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಡಾ. ಮನೋನ್ಮಣಿ ಅವರು ಮುಂದಿನ ದಿನಗಳಲ್ಲಿ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ಕ್ಷೇತ್ರದಲ್ಲಿ ಮಹತ್ವದ್ದನ್ನು ಸಾಧಿಸಬಲ್ಲರು ಎಂಬ ನಿರೀಕ್ಷೆಯಿಟ್ಟುಕೊಳ್ಳಬಹುದು.

**ನಿರೂಪಣೆ: ಶ್ರೀವತ್ಸ**

### ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದಿಂದ ಉದ್ಯೋಗ ಮೇಳ 2024

# ವಿದ್ಯಾರ್ಥಿಗಳು ಉಜ್ವಲ ಭವಿಷ್ಯವನ್ನು ರೂಪಿಸಲು ಉದ್ಯೋಗಾವಕಾಶ ಅಗತ್ಯ

ಇತ್ತೀಚಿನ ದಿನಗಳಲ್ಲಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪದವೀಧರರಾದ ನಂತರ ವಿಶ್ವದಾದ್ಯಂತ ಲಭ್ಯವಿರುವ ಉದ್ಯೋಗಾವಕಾಶಗಳನ್ನು ತಮ್ಮದಾಗಿಸಿಕೊಳ್ಳಲು ಸಮರ್ಥರಾಗಬೇಕು. ಸುಮಾರು 10 ಕ್ಕೂ ಹೆಚ್ಚು ಕಂಪನಿಗಳು ಹೆಚ್ಚಿನ ಐಟಿ ಮತ್ತು ನಾನ್ ಐಟಿ ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿ, 75ಕ್ಕೂ ಹೆಚ್ಚಿನ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡರು. ಈ ಉದ್ಯೋಗ ಮೇಳದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಡಿಪ್ಲೋಮಾ, ಐಟಿಐ, ಬಿಸಿಎ, ಬಿ.ಕಾಂ, ಬಿ.ಇ. ಹಾಗೂ ಸ್ನಾತಕೋತ್ತರ ಪದವೀಧರರು ಸೇರಿ ಎಲ್ಲಾ ಶೈಕ್ಷಣಿಕ ಹಂತದ ಶಿಕ್ಷಣ ಪಡೆದ ಅಭ್ಯರ್ಥಿಗಳೂ ಸಹ ಭಾಗವಹಿಸಿ ಅದರ ಪ್ರಯೋಜನವನ್ನು ಪಡೆದುಕೊಂಡಿರುತ್ತಾರೆ. ಒಂದೇ ಸೂರಿನಡಿಯಲ್ಲಿ ವೃತ್ತಿಪರ ಕೌಶಲಕ್ಕೆ ಅನುಗುಣವಾಗಿ ಉದ್ಯೋಗಾವಕಾಶ ಕಲ್ಪಿಸುವುದು ಉದ್ಯೋಗ ಮೇಳದ ಮುಖ್ಯ ಉದ್ದೇಶವಾಗಿದೆ. ಪ್ರಸ್ತುತ ಕೈಗಾರಿಕಾ ಅಗತ್ಯಗಳಿಗೆ ಅನುಗುಣವಾಗಿ ಹುದ್ದೆಗಳಿಗೆ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಶ್ರೀದೇವಿ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ತಿಳಿಸಿದರು.

ನಗರದ ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ವತಿಯಿಂದ ಉದ್ಯೋಗ ಮೇಳ 2024 ಎಂಬ ಕಾರ್ಯಕ್ರಮವನ್ನು ಮಾ.21 ರಂದು ಗುರುವಾರ ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಆವರಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.




**ನಗರದ ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ವತಿಯಿಂದ ಉದ್ಯೋಗ ಮೇಳ–2024 ಎಂಬ ಕಾರ್ಯಕ್ರಮವನ್ನು ಮಾ.21 ರಂದು ಗುರುವಾರ ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಆವರಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಚಿತ್ರದಲ್ಲಿ ಶ್ರೀದೇವಿ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಇದ್ದಾರೆ. ಕಾರ್ಯಕ್ರಮದಲ್ಲಿ ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲರಾದ ಮುಬಾರಕ್, ಮುಖ್ಯ ಅತಿಥಿಗಳಾದ ಪ್ರದೀಪ್, ಪ್ರೊ. ಚೇತನ್ ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿ– ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.**

ಕಾರ್ಯಕ್ರಮದಲ್ಲಿ ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯರವರು ಮಾತನಾಡುತ್ತಾ "ವಿದ್ಯಾರ್ಥಿಗಳು ತಮ್ಮ ಹೆಸರು ಮತ್ತು ವಿದ್ಯಾರ್ಹತೆಯನ್ನು ನೊಂದಾಯಿಸಿಕೊಳ್ಳುವ ಮೂಲಕ ಕಂಪನಿಗಳ ನೇರ ಸಂದರ್ಶನದಲ್ಲಿ ಭಾಗವಹಿಸಿ, ತಮ್ಮ ವೃತ್ತಿ ಬದುಕನ್ನು ಪ್ರಾರಂಭಿಸುವ ಮೂಲಕ ಸ್ವಾವಲಂಬನೆಯನ್ನು ಸಾಧಿಸಿದ್ದಾರೆ" ಎಂದು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲರಾದ ಮುಬಾರಕ್‌ರವರು ಮಾತನಾಡುತ್ತಾ "ವಿದ್ಯಾರ್ಥಿಗಳಿಗೆ ಕಾರ್ಪೊರೇಟ್ ಸಂಸ್ಥೆಗಳು ನಿರೀಕ್ಷಿಸುವ ವಿವಿಧ ಅರ್ಹತೆಗಳಿಗೆ ಅಗತ್ಯವಾದ ಕೆಲವು ಕೌಶಲಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಹಾಗೂ ವಿವಿಧ ಕಂಪನಿಗಳಿಂದ ವಾರ್ಷಿಕ 3.5 ಲಕ್ಷದಿಂದ 5 ಲಕ್ಷದವರೆಗಿನ ವೇತನದ ಕೆಲಸಗಳಿಗೆ ಹಲವಾರು ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಪ್ರದೀಪ್, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಉದ್ಯೋಗ ಮತ್ತು ತರಬೇತಿ ವಿಭಾಗದ ಅಧಿಕಾರಿಯಾದ ಪ್ರೊ.ಎಂ.ಅಂಜನಮೂರ್ತಿ ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನ ಉದ್ಯೋಗಾಧಿಕಾರಿಯಾದ ಪ್ರೊ. ಚೇತನ್ ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**▪ ವರದಿ: ಎನ್. ಆನಂದ**

---

# ಪ್ರತಿಕಾ ವಿತರಕರ ಬದುಕು ಹಸನಾಗಲಿ





"ದಿನಪತ್ರಿಕೆಗಳನ್ನು ಮನೆಮನೆಗೂ ವಿತರಣೆ ಮಾಡುತ್ತಾ ಜೊತೆಯಲ್ಲಿ ಸಾಮಾಜಿಕ ಅಭಿರುಚಿಯುಳ್ಳ ಕೆಲಸ ಕಾರ್ಯಗಳನ್ನು ಮಾಡುತ್ತಿರುವ ತುಮಕೂರಿನ ಪತ್ರಿಕಾ ವಿತರಕರ ಆರೋಗ್ಯ ರಕ್ಷಣಾ ಕೆಲಸವನ್ನು ನಮ್ಮ ಶ್ರೀದೇವಿ ವೈದ್ಯಕೀಯ ಕಾಲೇಜು ವಹಿಸಿಕೊಳ್ಳುತ್ತದೆ. ನೀವು ಕಾರ್ಡ್ ಮಾಡಿಸಿಕೊಳ್ಳಿ, ಎಲ್ಲಾ ಚಿಕಿತ್ಸೆಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಕೊಡುವ ತೀರ್ಮಾನವನ್ನು ನಮ್ಮ ಸಂಸ್ಥೆ ಮಾಡಿದೆ. ನಿಮ್ಮಗಳ ಬದುಕು ಹಸನಾಗಬೇಕು, ನೀವು ಸಮಾಜಕ್ಕೆ ಪ್ರತಿನಿತ್ಯ ಹೊಸ ಸುದ್ದಿಯನ್ನು ಮುಟ್ಟಿಸುತ್ತಾ ಅವರನ್ನು ಜಾಗ್ರತರನ್ನಾಗಿ ಮಾಡುತ್ತಿದ್ದೀರಿ. ನೀವು ಅಭಿನಂದನೆಗೆ ಅರ್ಹರು" ಎಂದು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ತಿಳಿಸಿದರು.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, ತುಮಕೂರು ಜಿಲ್ಲಾ ದಿನಪತ್ರಿಕೆ ನಂಬಿಕೆದಾರರ ಸಂಘ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ, ಅರಸೇನಾಪಡೆ ಯೋಧರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಅಭ್ಯುದಯ ಎಂಟರ್‌ಪ್ರೈಸಸ್ ಸಹಯೋಗದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಏಪ್ರಿಲ್ 1ರಂದು ಸಿದ್ಧಗಂಗಾ ಮಠಾಧೀಶರಾಗಿದ್ದ ಪೂಜ್ಯಡಾ.ಶ್ರೀ.ಶಿವಕುಮಾರ ಸ್ವಾಮೀಜಿ ಇವರ 117ನೇ ಜನ್ಮ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಡಾ. ಹುಲಿನಾಯ್ಕರ್ ಅವರು ಹೇಳಿದ ಮಾತುಗಳಿವು.

ಪ್ರಜಾಪ್ರಗತಿ ದಿನಪತ್ರಿಕೆಯ ಸಂಪಾದಕರಾದ ಎಸ್.ನಾಗಣ್ಣ ಅವರು ಮಾತನಾಡುತ್ತಾ "ಪತ್ರಿಕಾ ವಿತರಕರು ಸದಾ ಉತ್ಸಾಹದ ಚಿಲುವೆಗಳಾಗಿದ್ದಾರೆ, ಅವರ ಆಲೋಚನೆಗಳು ಇತರರಿಗೆ ಮಾದರಿಯಾಗಲಿ, ಡಾ.ಶ್ರೀ ಶಿವಕುಮಾರ ಮಹಾಸ್ವಾಮೀಜಿಗಳವರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿದ ಇವರ ಕಾರ್ಯ ನಿಜಕ್ಕೂ ಅಭಿನಂದನಾರ್ಹ" ಎಂದರು. ಪತ್ರಕರ್ತ ಸೊಗಡು ವೆಂಕಟೇಶ್‌ರವರು ಮಾತನಾಡುತ್ತಾ "ಪತ್ರಿಕಾ ವಿತರಕರು ಯಾವುದರಲ್ಲೂ ಕಡಿಮೆ ಇಲ್ಲ, ಅವರ ಬದುಕು ಆದರ್ಶಪ್ರಾಯವಾದದ್ದು" ಎಂದರು. ಈ ರಕ್ತದಾನ ಶಿಬಿರದಲ್ಲಿ ಸುಮಾರು 40ಕ್ಕೂ ಹೆಚ್ಚು ವಿತರಕರು ರಕ್ತದಾನ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪತ್ರಿಕಾ ವಿತರಕರ ಸಂಘದ ಗೌರವಾಧ್ಯಕ್ಷ ನರಸಿಂಹಯ್ಯ, ಅಧ್ಯಕ್ಷ ಚೆಲುವರಾಜು, ರಾಜ್ಯ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷರಾದ ಶಂಭುಲಿಂಗ, ಶ್ರೀದೇವಿ ಸಂಸ್ಥೆಯ ಶ್ರೀಮತಿ ಅಂಬಿಕಾ ಹುಲಿನಾಯ್ಕರ್, ಉಪಾಧ್ಯಕ್ಷರಾದ ರಂಗಮುತ್ತಯ್ಯ, ಕಾರ್ಯದರ್ಶಿ ವಾಸುದೇವ ಎನ್.ನಾದೂರು, ಖಜಾಂಚಿ ಆನಂದ್ ಜೈನ್, ನಿರ್ದೇಶಕರುಗಳಾದ ಲೋಕೇಶ್ ಭದ್ರಾಚಾರ್, ಪಾಂಡುರಂಗ ಭೂತಯ್ಯ, ಬಿ.ಆರ್.ಗಂಗಮುತ್ತಯ್ಯ ಮತ್ತು ಲೋಕೇಶ್ ಅವರುಗಳು ಇಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ರಾಜ್ಯ ಪತ್ರಿಕಾ ವಿತರಕರ ಕ್ಷೇಮ ನಿಧಿಗೆ ಸೊಗಡು ವೆಂಕಟೇಶ್ ಅವರು 50,000 ದೇಣಿಗೆ ನೀಡಿದರು.

**▪ ವರದಿ: ಎನ್. ಆನಂದ**

---

### ಶ್ರೀದೇವಿ, ಶ್ರೀ ರಮಣಮಹರ್ಷಿ ಮತ್ತು ಶ್ರೀದುರ್ಗಾಂಬಾ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜು

# ಬಿ.ಎಸ್‌ಸಿ. ಮತ್ತು ಡಿಪ್ಲೋಮ ಪ್ರಥಮ ವರ್ಷದ ವಿದ್ಯಾರ್ಥಿಗಳ ದೀಪ ಬೆಳಗಿಸುವ ಸಮಾರಂಭ

"ಪ್ರಸ್ತುತ ವಿಶ್ವದ ಆರೋಗ್ಯದ ಕ್ಷೇತ್ರದಲ್ಲಿ ಬದಲಾವಣೆಯಾಗುತ್ತಿದೆ. ವೃತ್ತಿಪರತೆಯ ಕ್ಷೇತ್ರದಲ್ಲಿ ನರ್ಸಿಂಗ್ ಶಿಕ್ಷಣ ಮತ್ತು ತರಬೇತಿ ಉತ್ತಮ ಅವಕಾಶವನ್ನು ಪಡೆಯುತ್ತಿದೆ. ಅದರ ಪ್ರಯೋಜನ ಪಡೆದುಕೊಳ್ಳಲು ನರ್ಸಿಂಗ್ ಕ್ಷೇತ್ರದ ವಿದ್ಯಾರ್ಥಿಗಳು ಉತ್ತಮ ಸೇವಾಮನೋಭಾವ ಮತ್ತು ಕೌಶಲಗಳ ಗುಣವನ್ನು ಬೆಳಸಿಕೊಳ್ಳಬೇಕು. ಶುಶ್ರೂಷಕರು ರೋಗಿಗಳಿಗೆ ನಗುಮುಖದಿಂದ ಆರೈಕೆ ಮಾಡಿದರೆ ರೋಗಿಗಳು ಬೇಗ ಗುಣಮುಖರಾಗುತ್ತಾರೆ. ಅವರ ಆಶೀರ್ವಾದವೇ ನಿಮ್ಮ ಯಶಸ್ಸಿನ ಮೂಲದ್ರವ್ಯವಾಗುತ್ತದೆ" ಎಂದು ನರ್ಸಿಂಗ್ ನಿರ್ದೇಶನಾಲಯದ ಸಹಾಯಕ ನಿರ್ದೇಶಕರಾದ ಶ್ರೀಮತಿ ಉಷಾ ಎಂ. ಭಂಡಾರಿ ಅವರು ತಿಳಿಸಿದರು.

ಶ್ರೀದೇವಿ ನರ್ಸಿಂಗ್ ಕಾಲೇಜು ಹಾಗೂ ಶ್ರೀ ರಮಣಮಹರ್ಷಿ ನರ್ಸಿಂಗ್ ಕಾಲೇಜು, ಶ್ರೀದುರ್ಗಾಂಬಾ ಸ್ಕೂಲ್ ಆಫ್ ನರ್ಸಿಂಗ್ 2024 ನೇ ಸಾಲಿನ ಪ್ರಥಮ ವರ್ಷದ ಡಿಪ್ಲೋಮಾ ನರ್ಸಿಂಗ್ ಮತ್ತು ಬಿ.ಎಸ್ಸಿ. ನರ್ಸಿಂಗ್ ವಿದ್ಯಾರ್ಥಿಗಳಿಗೆ ಜ್ಯೋತಿ ಬೆಳಗಿಸುವ ಹಾಗೂ ಪ್ರತಿಜ್ಞಾ ವಿಧಿ ಬೋಧಿಸುವ ಸಮಾರಂಭವನ್ನು ಏಪ್ರಿಲ್ 4 ರಂದು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಮಾತನಾಡುತ್ತಾ "ಕೋವಿಡ್ ಸಂದರ್ಭದಲ್ಲಿ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಶುಶ್ರೂಷಕರು ಸಲ್ಲಿಸಿದ ಸೇವೆಯನ್ನು ನಾಗರಿಕ ಸಮಾಜ ಮರೆಯುವುದಿಲ್ಲ. ಈ ಕಾಲದಲ್ಲಿ ಎಷ್ಟೋ ಜನ ನರ್ಸ್‌ಗಳು ತಮ್ಮ ಪ್ರಾಣ ತೊರೆದು ಪೇಷಂಟ್‌ಗಳ ಜೀವ ಉಳಿಸಿದ್ದಾರೆ. ವೈದ್ಯರ ಜೊತೆ ಜೊತೆಗೆ ಅವರು ಕೋವಿಡ್ ವಿರುದ್ಧ ಹೋರಾಡಿದ್ದಾರೆ. ಇಂತಹವರನ್ನು ದೇಶಯೋಧರೆಂದು ಪರಿಗಣಿಸಬೇಕು. ನರ್ಸಿಂಗ್, ಮಾನವರ ಸೇವೆ ಮಾಡಲು ಅತ್ಯಮೂಲ್ಯವಾದ ವೃತ್ತಿಯಾಗಿದೆ. ನರ್ಸಿಂಗ್ ವಿದ್ಯಾರ್ಥಿಗಳು ಉತ್ತಮ ಶುಶ್ರೂಷಕರಾಗಲು ಅಗತ್ಯವಾದ ಗುಣಗಳನ್ನು ವಿದ್ಯಾರ್ಥಿ ಜೀವನದಿಂದಲೇ ಬೆಳೆಸಿಕೊಳ್ಳಬೇಕು" ಎಂದರು.

**▪ ವರದಿ: ಎನ್. ಆನಂದ**




**ನರ್ಸಿಂಗ್ ನಿರ್ದೇಶನಾಲಯದ ಸಹಾಯಕ ನಿರ್ದೇಶಕರಾದ ಉಷಾ ಎಂ ಭಂಡಾರಿ, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ.ಅಸ್ಗರ್ ಬೇಗ್, ಕೆ.ಎಸ್.ಡಿ.ಎನ್.ಇ.ಬಿ. ಕಾರ್ಯದರ್ಶಿಯಾದ ಎನ್.ಮಡಿವಾಳಪ್ಪ, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ, ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಆರ್.ಕೆ. ಮುನಿಸ್ವಾಮಿ, ಶ್ರೀರಮಣ ಮಹರ್ಷಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಸ್.ಉಷಾ, ಹಾಗೂ ಶ್ರೀದುಗಾಂಬಾ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಡಾ.ಅಂಬಾ.**

### ಶ್ರೀದೇವಿ ವೈದ್ಯಕೀಯ ಮತ್ತು ಸಂಶೋಧನಾ ವಿದ್ಯಾಸಂಸ್ಥೆ

# ನೇತ್ರಶಾಸ್ತ್ರ ವಿಭಾಗದ ಕಾರ್ಯಕ್ಷಮತೆ ಮತ್ತು ರೋಗಿಗಳೊಡನಿರುವ ಬದ್ಧತೆ



ಡಾ. ಸಂದೀಪ್ ಶೆಣೈ



ಡಾ. ಲಾವಣ್ಯ ರಮಣ



ಡಾ. ಕೆ.ಪಿ.ಕಲ್ಲೇಶ್ವರ



ಡಾ. ಪ್ರವೀಣ್‌ಕುಮಾರ್

◀◀ ...ಮೊದಲನೇ ಪುಟದಿಂದ

ಒಮ್ಮೆ ಬೆಳಗಿನ ವಾಕ್ ಮಾಡುತ್ತಿರುವಾಗ ಕಣ್ಣಿಗೆ ಏನೂ ಕಾಣಿಸಿದಂತಾಯಿತು. 'ಓಹೋ, ನನ್ನ ಕಣ್ಣಿಗೆ ಏನೂ ಆಗಿದೆ' ಎಂಬ ಭಾವನೆ ಬಂತು. ತಕ್ಷಣ ನಮ್ಮ ಆಪ್ತರಕ್ಷಕರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರಿಗೆ ದೂರವಾಣಿ ಮಾಡಿದಾಗ 'ತಡ ಮಾಡುವುದು ಬೇಡ, ಬೇಗ ಬನ್ನಿ' ಎಂದರು. ತುಮಕೂರಿನ ಶ್ರೀದೇವಿ ಮೆಡಿಕಲ್ ಕಾಲೇಜ್‌ಗೆ ಹೋದೆವು. ಅಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಡಾ.ಜಿ.ಎಸ್.ಪ್ರವೀಣ್‌ಕುಮಾರ್ ಅವರು ನನ್ನ ಕಣ್ಣನ್ನು ಪರೀಕ್ಷೆ ಮಾಡಿ "ಮೇಡಂ, ನೀವು ಓದುವುದು ಮತ್ತು ಬರೆಯುವುದನ್ನು ಬದುಕು ಎಂದು ಭಾವಿಸಿರುವಿರಿ. ಆದರೆ ಕಣ್ಣಿಗೆ ಅಪಾಯವಿರುವ ವಿಚಾರವೇ ನಿಮಗೆ ತಿಳಿದಿಲ್ಲ. ಕ್ಯಾಟ್‌ರಾಕ್ಟ್ ಬೆಳೆದಿರುವುದು ಮಾತ್ರವಲ್ಲದೆ ನಿಮಗೆ ಕಣ್ಣೀರಿನ ಸಮಸ್ಯೆಯೂ ಇದೆ" ಎಂದರು. ಅದಕ್ಕೆ ನಾನು 'ಸಾರ್ ನನಗೆ ಕಣ್ಣೀರು ಬರುವುದೇ ಇಲ್ಲ' ಎಂದೆ. ಅದಕ್ಕವರು "ಆರೋಗ್ಯಯುಕ್ತ ಕಣ್ಣಗಳಲ್ಲಿ ಸಹಜವಾಗಿ ನೀರಿನ ಅಂಶವಿರಬೇಕು. ನಿಮಗೆ ಕಣ್ಣಿನಲ್ಲಿ ಪೊರೆ ಬೆಳೆದಿರುವ ಕಾರಣ 'ಕ್ಯಾಟ್‌ರಾಕ್ಟ್ ಆಪರೇಷನ್' ತಕ್ಷಣ ಮಾಡಬೇಕಾಗಿದೆ" ಎಂದರು.

ವೈದ್ಯರು ಹೇಳಿದ ಮೇಲೆ ಯೋಚಿಸಲು ಇನ್ನೇನು ಉಳಿದಿದೆ. ಆಪರೇಷನ್ ಮಾಡಿಸಿಕೊಳ್ಳಲು ಮಾನಸಿಕವಾಗಿ ಸಿದ್ಧಳಾದೆ. ಆಪರೇಷನ್‌ಗೆ ಪೂರ್ವಭಾವಿ ನಡೆಯುವ ಪರೀಕ್ಷೆಗಳು ಚಕಚಕನೆ ನಡೆದವು. ಈ ವಿಷಯದಲ್ಲಿ ಡಾ.ಲಾವಣ್ಯ ರಮಣ ಅವರು ಮಾಡಿದ ಸಹಾಯ ನೆನೆಯುವಂತಹುದು. ಈ ಮಧ್ಯೆ ಶುಗರ್ ಪ್ರಾರಂಭವಾಗಿದೆ ಎಂದು ಪರೀಕ್ಷೆಗಳು ಹೇಳಿದವು. ಆಗ ಡಾ.ರಮಣ ಇದು ಎಲ್ಲರಿಗೂ ಬರುವಂತಹುದು ಎಂದ್ಹೇಳಿ ತಕ್ಷಣ ಮಾತ್ರೆಗಳನ್ನು ನೀಡಿದರು. ಅದು ಸಹ ನಿಯಂತ್ರಣಕ್ಕೆ ಬಂತು. ಈ ವೈದ್ಯಕೀಯ ದಂಪತಿಗಳು ಶ್ರೀದೇವಿ ಆಸ್ಪತ್ರೆಗೆ ಮಾತ್ರವಲ್ಲ, ಮುಂದಿನ ದಿನಗಳಲ್ಲಿ ವಿಶಾಲ ಸಮಾಜಕ್ಕೂ ಅಮೂಲ್ಯ ಸಂಪತ್ತು ಎನಿಸುತ್ತಾರೆ ಎಂದು ನನ್ನ ಅಂತರಾತ್ಮ ಹೇಳತೊಡಗಿತು.

ನನಗೆ ಕಣ್ಣಿನ ಪರೀಕ್ಷೆ ನಡೆಸಿ ಶಸ್ತ್ರಚಿಕಿತ್ಸೆ ಮಾಡುವವರು ಡಾ.ಜಿ.ಎಸ್. ಪ್ರವೀಣ್‌ಕುಮಾರ್ ಎಂಬುದು ತಿಳಿಯಿತು. ಅವರು ಎಂತಹ ನುರಿತ ಶಸ್ತ್ರಚಿಕಿತ್ಸಕರು ಎಂಬುದನ್ನು ಈ ಸಂದರ್ಭದಲ್ಲಿ ಹೇಳಲೇಬೇಕು. ನನ್ನನ್ನು ಶಸ್ತ್ರಚಿಕಿತ್ಸೆಯ ಟೇಬಲ್ ಮೇಲೆ ಮಲಗಿಸಿ ಮಾತನಾಡುತ್ತಲೇ ಆಪರೇಷನ್ ಮುಗಿಸಿದ ಜಾಣ್ಮೆ ಡಾ.ಪ್ರವೀಣ್‌ಕುಮಾರ್ ಅವರದು. ಅವರು ಕೇವಲ ಏಳು ನಿಮಿಷದಲ್ಲೇ ನನ್ನ ಕಣ್ಣಿಗೆ PHACO EMULSIFICATION ಶಸ್ತ್ರಚಿಕಿತ್ಸೆಯನ್ನು ಮುಗಿಸಿದ್ದರು. ಕಣ್ಣಿನ ಪೊರೆ ತೆಗೆದು ಲೆನ್ಸ್ ಕೂಡಿಸಿದ್ದರು. ಮರುದಿನ ಬ್ಯಾಂಡೇಜ್ ಬಿಚ್ಚಿ, ಕಣ್ಣಿನ ಪರೀಕ್ಷೆ ಮಾಡಬೇಕಾದರೆ ನಾನೇ ಆಶ್ಚರ್ಯಚಕಿತಳಾದೆ. ಅತ್ಯಂತ ಸಣ್ಣ ಅಕ್ಷರಗಳನ್ನು ಓದಲು ಸಾಧ್ಯವಾಯಿತು. ಎಷ್ಟೋ ದಿನಗಳಿಂದ ಓದಲು ಕಷ್ಟಪಡುತ್ತಿದ್ದ ನನಗೆ ಪರಿಹಾರ ದೊರೆತಾಗ ಎಂತಹ ಸಂತೋಷವಾಯಿತೆಂದರೆ ಅದನ್ನು ಶಬ್ದಗಳಲ್ಲಿ ವರ್ಣಿಸುವುದು ಸಾಧ್ಯವಿಲ್ಲ. ಅದಕ್ಕಾಗಿಯೇ 'ಆಪರೇಷನ್ ಎನ್ನುವುದು ಸುಂದರ ಅನುಭವ' ಎಂದಿದ್ದೇನೆ. ಅದರಲ್ಲೂ ಬರವಣಿಗೆಯಲ್ಲಿ ಆಸಕ್ತಿಯುಳ್ಳವರಿಗೆ ಓದು ಆಕ್ಸಿಜನ್ ಇದ್ದಂತೆ! ಮನಸ್ಸು ಡಾ.ಪ್ರವೀಣ್‌ಕುಮಾರ್ ಅವರಿಗೆ ಬಾಗಿತು.

ನನ್ನ ಆಪರೇಷನ್ ಆದ ಮೇಲೆ ನನ್ನ ಪತಿ ಕಮಲೇಶ ಆಪರೇಷನ್ ಮಾಡಿಸಿಕೊಳ್ಳಲು ಮನಸ್ಸು ಮಾಡಿದರು. ಅವರಿಗೂ ಅದ್ಭುತವಾದ ಪ್ರಯೋಜನವಾಯಿತು. ನಮ್ಮ ಕುಟುಂಬದ ಆಪ್ತರಾದ ಮಾದಯ್ಯ ಅವರ ಕಣ್ಣಿನಲ್ಲಿ ದುರ್ಮಾಂಸ ಬೆಳೆದಿತ್ತು. ಅದನ್ನು ಆಪರೇಷನ್ ಮಾಡುವುದು ಸವಾಲಿನ ಕೆಲಸ. ಅದನ್ನು ಮೆಡಿಕಲ್ ಭಾಷೆಯಲ್ಲಿ Pterygium excision and conjunctival limbal autograft with glue ಎನ್ನುತ್ತಾರೆ. ನಾವುಗಳೆಲ್ಲಾ ಶಸ್ತ್ರಚಿಕಿತ್ಸೆಯ ನಿಯಮಾನುಸಾರ ಅನುಸರಿಸಬೇಕಾದ ವಿಧಿಗಳನ್ನು ಅನುಸರಿಸಿ ಹುಷಾರಾದೆವು.

ಡಾ.ಜಿಎಸ್.ಪ್ರವೀಣ್‌ಕುಮಾರ್ ಅವರು ತಮ್ಮ ಸ್ವಯಂ ಶಕ್ತಿಸಾಮರ್ಥ್ಯದಿಂದ ಇಂತಹ ಕೌಶಲವನ್ನು ರೂಢಿಸಿಕೊಂಡಿದ್ದಾರೆ ಎನ್ನುವುದು ತಿಳಿಯಿತು. ಅವರ ಮನೆಯಲ್ಲಿ ವೈದ್ಯರಾಗಿರುವುದು ಅವರೇ ಮೊದಲು. ಅವರ ತಂದೆ ಸಿ.ಶಿವರುದ್ರಪ್ಪ ಅವರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಪರಶುರಾಮಪುರ ಹೋಬಳಿಯ ಸೂರನಹಳ್ಳಿಯವರು. ಈ ಗ್ರಾಮವನ್ನು ಮೊದಲು 'ಶೂರನಹಳ್ಳಿ' ಎಂದು ಕರೆಯುತ್ತಿದ್ದರಂತೆ! ಇವರ ತಾಯಿ ಡಿ. ರಮಾದೇವಿ ಅವರು ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿಗೆ ಸೇರಿದವರು.

ಶ್ರೀ ಶಿವರುದ್ರಪ್ಪ ಅವರು ತುಮಕೂರಿನ ಖಾಸಗಿ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ಈ ದಂಪತಿಗಳಿಗೆ ಡಾ.ಪ್ರವೀಣ್‌ಕುಮಾರ್ ಸೇರಿದಂತೆ ಮೂವರು ಮಕ್ಕಳು. ಡಾ.ಪ್ರವೀಣ್‌ಕುಮಾರ್ ಅವರನ್ನು ಹೊರತುಪಡಿಸಿ ಇಬ್ಬರು ಹೆಣ್ಣು ಮಕ್ಕಳು ಇಂಜಿನಿಯರಿಂಗ್ ಪದವೀಧರರು.

ಡಾ.ಪ್ರವೀಣ್‌ಕುಮಾರ್ ಅವರು ತಮ್ಮ ಶಿಕ್ಷಣವನ್ನು ತುಮಕೂರಿನಲ್ಲೇ ಮುಗಿಸಿದ್ದಾರೆ. ಸರ್ಕಾರಿ ಕೋಟಾದಲ್ಲಿ ಸಿದ್ಧಾರ್ಥ ಮೆಡಿಕಲ್ ಕಾಲೇಜ್ ಸೀಟು ಪಡೆದು ಎಂ.ಬಿ.ಬಿ.ಎಸ್ ಮುಗಿಸಿದ್ದಾರೆ. ಪ್ರವೇಶ ಪರೀಕ್ಷೆ ಬರೆದು ಆಂಧ್ರಪ್ರದೇಶದ ಕರ್ನೂಲ್ ಸರ್ಕಾರಿ ಮೆಡಿಕಲ್ ಕಾಲೇಜ್‌ನಲ್ಲಿ ಆಫ್ತಮಾಲಜಿಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಇಡೀ ರಾಷ್ಟ್ರದಲ್ಲಿ ಖ್ಯಾತವಾಗಿರುವ ಮಧುರೈನ ಶ್ರೀ ಅರವಿಂದ ಕಣ್ಣಿನ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದಾರೆ. ಡಾ. ಪ್ರವೀಣ್‌ಕುಮಾರ್ ಅಲ್ಲಿ ಕೆಲಸ ಮಾಡಿ ಸುಮಾರು ಆರುಸಾವಿರ ಆಪರೇಷನ್‌ಗಳನ್ನು ಮಾಡಿ ವೃತ್ತಿಯಲ್ಲಿ ತಮ್ಮದೇ ಆದ ಕೌಶಲವನ್ನು ಗಳಿಸಿಕೊಂಡಿದ್ದಾರೆ.

2015ರಲ್ಲಿ ಅವರು ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜ್‌ಗೆ ಬಂದರು. ಇಲ್ಲಿಗೆ ಬಂದಮೇಲೆ ಮತ್ತೆ ಸುಮಾರು ನಾಲ್ಕು ಸಾವಿರ ಆಪರೇಷನ್‌ಗಳನ್ನು ಮಾಡಿರುವ ಸಾಧನೆ ಅವರದು. ಅವರ ಮಡದಿ ಡಾ.ಪಲ್ಲವಿ ಹರಸೂರ್ ಅವರು ಶ್ರೀದೇವಿ ವೈದ್ಯಕೀಯ ಕಾಲೇಜಿನ ಮಕ್ಕಳರೋಗ ಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು. ಈ ದಂಪತಿಗಳಿಗೆ ಚಿರಂಜೀವಿ ಹೇರಂಭ ಆದ್ವಿಕ್ ಎನ್ನುವ ಗಂಡು ಮಗುವಿದೆ.

ಭಾರತದಲ್ಲಿ ನೇತ್ರದ ಆರೋಗ್ಯ ಕುರಿತು ವಿಶೇಷವಾದ ಅರಿವು ಇದೆ. ಕಣ್ಣಿನ ಸಮಸ್ಯೆ ಕಾಣಿಸಿಕೊಂಡ ತಕ್ಷಣ ಸಾರ್ವಜನಿಕರು ನೇತ್ರತಜ್ಞರ ಬಳಿ ಬರುತ್ತಾರೆ. ಭಾರತ ಸರ್ಕಾರ ಅಂಧತ್ವ ನಿವಾರಣೆಗೆ ವಿಶೇಷ ಕಾರ್ಯಕ್ರಮ ರೂಪಿಸಿದೆ. ಅಲ್ಲದೇ ಲಯನ್ ಮತ್ತು ರೋಟರಿ ಸಂಸ್ಥೆಗಳು ರಾಷ್ಟ್ರದ ಮಾನವ ನೇತ್ರದ ಆರೋಗ್ಯದ ಬಗ್ಗೆ ಕಾರ್ಯಕ್ರಮ ರೂಪಿಸಿ ಅನುಷ್ಠಾನ ಮಾಡುತ್ತಿವೆ. ಇಂತಹ ಸಂದರ್ಭದಲ್ಲಿ ಡಾ. ಪ್ರವೀಣ್‌ಕುಮಾರ್ ಅಂತಹ ಯುವ ನೇತ್ರವೈದ್ಯರು ತಮ್ಮ ಕ್ಷೇತ್ರದಲ್ಲಿ ಛಾಪು ಮೂಡಿಸಬೇಕಾದರೆ ವಿಶೇಷವಾದ ಸಾಧನೆ ಮಾಡಬೇಕಾಗುತ್ತದೆ. ಡಾ.ಮೋದಿ. ಡಾ.ಜೋಷಿ ಡಾ.ಭುಜಂಗಶೆಟ್ಟಿ ಮತ್ತು ಕಾರ್ತಿಕ್ ಕಣ್ಣಿನ ಆಸ್ಪತ್ರೆಯ ಡಾ.ರವೀಂದ್ರ ಮೊದಲಾದವರು ಈ ಕ್ಷೇತ್ರದಲ್ಲಿ ಅಮೋಘವಾದ ಸಾಧನೆ ಮಾಡಿ ಜನಮನದಲ್ಲಿ ಪ್ರತಿಷ್ಠಾಪನೆಯಾಗಿದ್ದಾರೆ.

ಇಂದಿನ ಸಂದರ್ಭದಲ್ಲಿ ಡಾ.ಪ್ರವೀಣ್‌ಕುಮಾರ್ ಅವರಂತಹ ಯುವವೈದ್ಯರಿಗೆ, ವೈದ್ಯಕೀಯ ಕ್ಷೇತ್ರದಲ್ಲಿ ಐವತ್ತು ವರ್ಷಗಳ ಅನುಭವವಿರುವ, ಶ್ರೀದೇವಿ ವಿದ್ಯಾಸಂಸ್ಥೆಯ ಸ್ಥಾಪಕರೂ ಖ್ಯಾತ ಸರ್ಜನ್ ಆಗಿರುವ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಕೆಲವು 'ಟಿಪ್ಸ್' ಗಳನ್ನು ನೀಡುತ್ತಾರೆ. ಅವರ ಪ್ರಕಾರ "ಇಂತಹ ತರುಣ ವೈದ್ಯರು 'ಅಕಾಡೆಮಿಕ್' ನೆಲೆಯಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಬೇಕು. ಮೇಲೆ ಸ್ಮರಿಸಿದ ಸಾಧಕರಿಗೆ ಕ್ಲಿನಿಕಲ್ ಕ್ಷೇತ್ರದಲ್ಲಿ ಮಾತ್ರ ಅನುಭವಿತ್ತು. ಅವರು ಲೆಕ್ಕಕ್ಕಿಲ್ಲದಷ್ಟು ಆಪರೇಷನ್ ಮಾಡಿ ಕೀರ್ತಿ ಮತ್ತು ಹಣವನ್ನು ಸಂಪಾದಿಸಿದ್ದರು. ಡಾ.ಪ್ರವೀಣ್‌ಕುಮಾರ್ ಅಂತಹ ತರುಣ ಅವರುಗಳನ್ನು ಮೀರಿ ಸಾಧನೆ ಮಾಡುವ ಅವಕಾಶವಿದೆ. ಅದೃಷ್ಟವೆಂಬಂತೆ ಸ್ನಾತಕೋತ್ತರ ವಿದ್ಯಾರ್ಥಿಗಳಿರುವ ವೈದ್ಯಕೀಯ ಕಾಲೇಜಿನಲ್ಲಿ ಇವರು ಕೆಲಸ ಮಾಡುತ್ತಿದ್ದಾರೆ. ತರುಣ ವೈದ್ಯರು ಕ್ಲಿನಿಕಲ್ ಕ್ಷೇತ್ರದ ಜೊತೆ ಶೈಕ್ಷಣಿಕವಾಗಿಯೂ ಉತ್ತಮ ಸಾಧನೆ ಮಾಡುವ ಆ ಮೂಲಕ ಅಂತಾರಾಷ್ಟ್ರೀಯ ಖ್ಯಾತಿ ಗಳಿಸುವ ಅವಕಾಶ ಹೇರಳವಾಗಿದೆ.

ಭಾರತ ಸರ್ಕಾರ ಪ್ರತಿ ಜಿಲ್ಲೆಯಲ್ಲೂ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಿರುವ ಕಾರಣವೇ ಸ್ಥಳೀಯ ಮಟ್ಟದಲ್ಲಿ ಸಂಶೋಧನೆ ನಡೆದು ಅದರ ಪ್ರಯೋಜನ ಸ್ಥಳೀಯ ದೊರೆಯಬೇಕು. ಇಂದಿಗೂ ಎಷ್ಟೋ ಕಾಯಿಲೆಗಳಿಗೆ ಔಷಧಗಳು ದೊರೆಯುತ್ತಿಲ್ಲ.



ಡಾ. ಪ್ರವೀಣ್‌ಕುಮಾರ್, ಡಾ.ಪಲ್ಲವಿ ಹರಸೂರ್ ಹಾಗೂ ಹೇರಂಭ ಆದ್ವಿಕ್

ಡಾ.ಪ್ರವೀಣ್‌ಕುಮಾರ್ ಅಂತಹವರು ನೇತ್ರಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಜ್ವಲಂತ ವಿಚಾರಗಳನ್ನಿಟ್ಟುಕೊಂಡು ಸಂಶೋಧನೆಯನ್ನು ಕೈಗೊಳ್ಳಬೇಕು. ಅಂತಹ ಸಂಶೋಧನೆಗಳಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲೇ ಸಹಾಯ ಮಾಡುವ ಪ್ರತಿಷ್ಠಿತ ಸಂಸ್ಥೆಗಳು ದೊರೆಯುತ್ತವೆ.

'ಭಾರತದಲ್ಲಿ ಸ್ಪರ್ಧೆ ಕೇವಲ ಕೆಳಹಂತದಲ್ಲಿರುತ್ತದೆ. ತ್ರಿಕೋನಾಕಾರದಲ್ಲಿ ಅವಕಾಶಗಳಿರುತ್ತವೆ. ಮೇಲೆ ಹೋದಂತೆಲ್ಲಾ ಯಾರು ಸ್ಪರ್ಧಿಗಳಿರುವುದಿಲ್ಲ. ನಮ್ಮ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ನಲವತ್ತರ ಆಸುಪಾಸಿನ ಯುವ ಬೋಧನಾವರ್ಗ ಶೇಕಡ 75ರಷ್ಟಿದೆ. ಅವರು ಅಕಾಡೆಮಿಕ್ ಆಗಿ ಬೆಳೆಯಲು ನಿರ್ಧಾರ ಕೈಗೊಂಡು, ಅದಕ್ಕಾಗಿ ಕೆಲಸ ಮಾಡಿದರೆ ಭಾರತದ ವೈದ್ಯಕೀಯ ಲೋಕ ಅವರಿಂದ ಅಮೂಲ್ಯವಾದ ಕೊಡುಗೆಯನ್ನು ಪಡೆಯುತ್ತದೆ".

ಡಾ.ಎಂ.ಆರ್.ಹುಲಿನಾಯ್ಕರ್ ಅವರು ಎಲ್ಲಾ ಯುವ ವೈದ್ಯರನ್ನು ಸಂಶೋಧನಾ ಕ್ಷೇತ್ರಕ್ಕೆ ಆಹ್ವಾನಿಸಿರುವುದು ಅತ್ಯಂತ ಸಮಂಜಸವಾಗಿದೆ. ಡಾ.ಹುಲಿನಾಯ್ಕರ್ ಅವರ ಬದುಕನ್ನು ನೋಡಿದರೆ ಅವರಲ್ಲಿರುವ ಸಾಹಸಪ್ರಜ್ಞೆಯ ವಿಚಾರ ತಿಳಿಯುತ್ತದೆ. ನಿರಂತರವಾಗಿ ಹೊಸದನ್ನು ಸಾಧಿಸುವ, ಚಿಂತನೆಯ ಫಲವಾಗಿ ಅವರು ಇಷ್ಟು ಎತ್ತರಕ್ಕೆ ಬೆಳೆದಿದ್ದಾರೆ ಎಂದು ಯಾರು ಬೇಕಾದರೂ ಊಹಿಸಿಬಹುದು.

**ಇತರೆ ಕೆಲವು ಮಾಹಿತಿಗಳು.**

ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಆಗಲೇ ಪ್ರಸ್ತಾಪಿಸಿದಂತೆ ಅತ್ಯಂತ ಮೇಧಾವಿ ವೈದ್ಯರು ನೇತ್ರಶಾಸ್ತ್ರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ವಿಭಾಗ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ನೇತ್ರಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿರುವ ಡಾ.ಸಂದೀಪ ಶೆಣೈ ಬಹುಮುಖ ಪ್ರತಿಭೆಯುಳ್ಳವರು. ಡಾ.ಸಂದೀಪ ಶೆಣೈ 'ಮೆಡಿಕಲ್ ರೆಟೀನಾ' ಚಿಕಿತ್ಸೆಯಲ್ಲಿ ಅಪಾರವಾದ ತಜ್ಞತೆ ಪಡೆದಿದ್ದಾರೆ. ಅಂಧರಿಗೆ ಕೃತಕ ಕಣ್ಣಿನಗುಡ್ಡೆಯನ್ನು ಜೋಡಿಸುವ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಾರೆ. ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಬಡವರಿಗೆ ಇಂತಹ ಚಿಕಿತ್ಸೆಗಳು ಹೆಚ್ಚು ಕಡಿಮೆ ಉಚಿತವಾಗಿ ನಡೆಯುತ್ತವೆ. ನೇತ್ರಶಾಸ್ತ್ರವನ್ನು ಅಭ್ಯಾಸ ಮಾಡುವ ಎಂ.ಬಿ.ಬಿ.ಎಸ್ ಮತ್ತು ಅದರಲ್ಲಿ ಸ್ನಾತಕೋತ್ತರ ಪದವಿ ಪಡೆಯುವವರಿಗೆ ಮೂರು ದಶಕಗಳಿಂದಲೂ ಬೋಧನೆ ಮಾಡಿದ ಅನುಭವ ಅವರದು.

ಈ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ.ಲಾವಣ್ಯರಮಣ ಅವರು ಹತ್ತಾರು ಕೆಲಸಗಳನ್ನು ಒಮ್ಮೆಲೆ ಮಾಡುವ ಸಾಮರ್ಥ್ಯವುಳ್ಳವರು. ಬೋಧನಾಕಾರ್ಯದ ಜೊತೆ ರೋಗಿಗಳನ್ನು ನೋಡುವುದು ಮತ್ತು ಶ್ರೀದೇವಿ ವಿದ್ಯಾಸಂಸ್ಥೆಯ ಅರೆ ವೈದ್ಯಕೀಯ ಕೋರ್ಸ್‌ಗೆ ಸಂಬಂಧಪಟ್ಟ ಆಡಳಿತಾತ್ಮಕ ವಿಚಾರದಲ್ಲೂ ಅವರು ತಮ್ಮ ಕರ್ತವ್ಯ ನಿರ್ವಹಿಸುತ್ತಾರೆ. ಯಾವುದೇ ವಿಭಾಗದ ಪೇಶಂಟ್‌ಗಳಾಗಿರಲಿ ಡಾ.ಲಾವಣ್ಯ, ಅವರ ಕಷ್ಟಸುಖಗಳನ್ನು ವಿಚಾರಿಸಿ ಸಮಸ್ಯೆಗೆ ಪರಿಹಾರ ಕೊಡುತ್ತಾರೆ. ಶ್ರೀದೇವಿ ವಿದ್ಯಾಸಂಸ್ಥೆಯಲ್ಲಿ ನಡೆಯುವ ಎಲ್ಲಾ ಸಭೆ–ಸಮಾರಂಭಗಳಲ್ಲೂ ಅವರ ಪಾತ್ರವಿರುತ್ತದೆ.

ನೇತ್ರಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ.ಕೆ.ಪಿ.ಕಲ್ಲೇಶ್ವರ ಅವರು ಸರ್ಕಾರಿ ವಲಯದಲ್ಲಿ ನೇತ್ರತಜ್ಞರಾಗಿ ಕೆಲಸ ಮಾಡಿ ವ್ಯಾಪಕ ಅನುಭವ ಗಳಿಸಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಕ್ಯಾಂಪ್‌ಗಳನ್ನು ಯಶಸ್ವಿಯಾಗಿ ನಿರ್ವಹಣೆ ಮಾಡಿ ಸೂಕ್ತ ಫಲಾನುಭವಿಗಳಿಗೆ ಸಹಾಯ ಮಾಡಿರುತ್ತಾರೆ. ಈ ವಿಭಾಗದಲ್ಲಿ ಡಾ.ಭಾನುಶ್ರೀ ಅವರು ಸಹಾಯಕ ಪ್ರಾಧ್ಯಾಪಕರಾಗಿರುತ್ತಾರೆ.

ಶ್ರೀದೇವಿ ವೈದ್ಯಕೀಯ ಕಾಲೇಜಿನ ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಿಗೆ ಮೂರನೆಯ ವರ್ಷ ನೇತ್ರಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಅಧ್ಯಯನ ವಿಷಯವೊಂದಿದೆ. ಈ ಬೋಧನಾವರ್ಗದವರು ಪಾಠ ಮಾಡುತ್ತಾರೆ. ಶೇಕಡ 95ರಷ್ಟು ಫಲಿತಾಂಶ ಬಂದಿರುತ್ತದೆ. ಜೊತೆಗೆ ನೇತ್ರಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳು ಸಹ ಇದ್ದಾರೆ. ಆಪ್ಟೊಮೆಟ್ರಿ (Optometry) ನಲ್ಲಿ ಮೂರು ವರ್ಷದ ಡಿಪ್ಲೊಮಾ ಮತ್ತು ನಾಲ್ಕು ವರ್ಷ ಪದವಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿರುತ್ತಾರೆ. ಅವರುಗಳಿಗೂ ಇವರೇ ಪಾಠ ಮಾಡುತ್ತಾರೆ.

ನೇತ್ರಶಾಸ್ತ್ರ ವಿಭಾಗಕ್ಕೆ ಹೊರ ರೋಗಿಗಳ ಸಂಖ್ಯೆ ಸಹ ಯಥೇಚ್ಛವಾಗಿದೆ. ಪ್ರತಿ ತಿಂಗಳು 1,500 ಪೇಶೆಂಟ್‌ಗಳು ಬರುತ್ತಿದ್ದಾರೆ. ಶ್ರೀದೇವಿ ಮೆಡಿಕಲ್ ಕಾಲೇಜ್‌ಗೆ ಹೊಂದಿಕೊಂಡಂತೆ ಸುಸಜ್ಜಿತವಾದ ಪ್ರಯೋಗಾಲಯ (ಲ್ಯಾಬ್) ಇದೆ. ಇದೊಂದು ಅತ್ಯಾಧುನಿಕ ಮಾದರಿಯ ಪ್ರಯೋಗಾಲಯ. ನೇತ್ರಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಆಧುನಿಕ ವೈದ್ಯಕೀಯ ಉಪಕರಣಗಳನ್ನು ಈ ವಿಭಾಗ ಹೊಂದಿದೆ. ಅದರಲ್ಲಿ ಕೆಲವೊಂದನ್ನು ಹೆಸರಿಸಬಹುದು. Humphrey's Automated Perimeter, Retina Funds Imaging System with Angiography, Non contact Tonometer, Anterior Segment Imaging Systeam, O.C.T. Green (Retinal) Laser,



ಶುಶ್ರೂಷಕರಾಗಿ ಶ್ವೇತಾ, ಸುಧಾ, ಮೇಘನಾ, ರಾಧಮ್ಮ ಹಾಗೂ ಕಾರ್ತಿಕ್.

Yag Laser and B-scan ಮುಂತಾದವು.

**ಸೇವಾಕ್ಷೇತ್ರದಲ್ಲಿಟ್ಟಿರುವ ಹೆಜ್ಜೆಗಳು**

ಆರೋಗ್ಯ ಕ್ಷೇತ್ರದಲ್ಲಿ ನೇತ್ರದ ವಿಚಾರದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಅರಿವಿರುವ ಕಾರಣ ಅನೇಕ ಸಾಮಾಜಿಕ ಸಂಸ್ಥೆಗಳು ಸ್ವಯಂ ಪ್ರೇರಣೆಯಿಂದ ಕೆಲಸ ಮಾಡುತ್ತಿವೆ. ಅಂತಾರಾಷ್ಟ್ರೀಯ ಸಂಸ್ಥೆಗಳು ಸೇವೆ ಸಲ್ಲಿಸುತ್ತಿರುವುದನ್ನು ಮರೆಯುವಂತಿಲ್ಲ. ಅನೇಕರು ಉಚಿತ ಕಣ್ಣಿನ ಪರೀಕ್ಷೆ ಶಸ್ತ್ರಚಿಕಿತ್ಸೆ ಹಾಗೂ ಕನ್ನಡಕಗಳನ್ನು ಪೂರೈಕೆ ಮಾಡುತ್ತಿದ್ದಾರೆ.

ಶ್ರೀದೇವಿ ವೈದ್ಯಕೀಯ ಕಾಲೇಜಿನ ನೇತ್ರಶಾಸ್ತ್ರ ವಿಭಾಗವು ಪ್ರತಿವರ್ಷ ಸೆಪ್ಟೆಂಬರ್ ತಿಂಗಳಲ್ಲಿ 'ನೇತ್ರದಾನ' ಕುರಿತು ಜಾಥಾ ನಡೆಸುತ್ತದೆ. ಅದೇ ರೀತಿ ಮಾರ್ಚ್ ತಿಂಗಳಲ್ಲಿ 'ವಿಶ್ವ ಗ್ಲೋಕೋಮಾ ದಿನ'ವನ್ನು ಆಚರಿಸುತ್ತದೆ.

'ಕಣ್ಣಿನ ಪೊರೆಯಿಂದಾಗಿ ಯಾರು ಅಂಧರಾಗಬೇಕಾಗಿಲ್ಲ' ಎನ್ನುವ ಧ್ಯೇಯ ವಾಕ್ಯದೊಡನೆ ಶ್ರೀದೇವಿ ವೈದ್ಯಕೀಯ ಕಾಲೇಜು ಭಾರತ ಸರ್ಕಾರ 1976ರಿಂದಲೂ ಅನುಷ್ಠಾನ ಮಾಡುತ್ತಿರುವ 'ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ'ದಲ್ಲಿ (National Programme For control of Blindness-NPCB) ತನ್ನನ್ನು ತೊಡಗಿಸಿಕೊಂಡಿದೆ.

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಿರಂತರವಾಗಿ ಜನರಿಗೆ ಕಣ್ಣಿನ ಪರೀಕ್ಷೆಯ ಕಾರ್ಯಕ್ರಮ ನಡೆಸಿ, ಕಣ್ಣಿನ ಪೊರೆ ಬೆಳೆದವರನ್ನು ಗುರುತಿಸಿ, ಅವರನ್ನು ಕಾಲೇಜಿನ ವಾಹನದಲ್ಲೇ ಶ್ರೀದೇವಿ ಆಸ್ಪತ್ರೆಗೆ ಕರೆ ತಂದು, ಅವರಿಗೆ ಎಲ್ಲಾ ರೀತಿಯ ವೈದ್ಯಕೀಯ ಪರೀಕ್ಷೆ ನಡೆಸಿ, ಅನಂತರ ಅವರನ್ನು ಆಪರೇಷನ್‌ಗೆ ಒಳಪಡಿಸಿ, ಒಂದೆರಡು ದಿನ ಆಸ್ಪತ್ರೆಯಲ್ಲೇ ಉಳಿಸಿಕೊಂಡು, ಆ ಸಮಯದಲ್ಲಿ ಅವರಿಗೆ ಊಟ, ವಸತಿ ಮತ್ತು ಔಷಧಗಳನ್ನು ಉಚಿತವಾಗಿ ಕೊಟ್ಟು, ಅವರು ದೃಷ್ಟಿ ಪಡೆದುಕೊಂಡ ನಂತರ ಅವರಿಗೆ ಕನ್ನಡಕ ನೀಡಿ, ಅದೇ ವಾಹನದಲ್ಲಿ ಅವರುಗಳನ್ನು ಅವರವರ ಹಳ್ಳಿಗಳಿಗೆ ಬಿಟ್ಟು ಬರಲಾಗುತ್ತದೆ. ಈ ಕಾರ್ಯಕ್ರಮದ ಮ್ಯಾನೇಜರ್ ಆಗಿ Refractionst ಹೆಚ್.ಎಸ್. ಕಾರ್ತಿಕ್ ಅವರು ಕೆಲಸ ಮಾಡುತ್ತಿದ್ದಾರೆ. ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯಲ್ಲಿ ಶುಶ್ರೂಷಕರಾಗಿ ಶ್ರೀಮತಿ ಸುಧಾ ಅವರು ಕರ್ತವ್ಯ ನಿರ್ವಹಣೆ ಮಾಡುತ್ತಾರೆ. ಅವರ ಜೊತೆ ಚೈತ್ರ, ಶ್ವೇತಾ, ಮೇಘನಾ ಮತ್ತು ರಾಧಮ್ಮ ಅವರು ದುಡಿಮೆಯನ್ನು ಮರೆಯುವಂತಿಲ್ಲ.

ಶ್ರೀದೇವಿ ಮೆಡಿಕಲ್ ಕಾಲೇಜಿನ ನೇತ್ರಶಾಸ್ತ್ರ ವಿಭಾಗವು ಮಕ್ಕಳ ಕಣ್ಣಿನ ರಕ್ಷಣೆ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ. ಬೆಂಗಳೂರಿನ ನಯೋನಿಕಾ ಐ ಕೇರ್ ಚಾರಿಟೆಬಲ್ ಟ್ರಸ್ಟ್‌ನವರು ಚಿಕ್ಕಮಕ್ಕಳು ಕಣ್ಣಿನ ಪೊರೆಯ ಆಪರೇಷನ್ ಮಾಡಲು ಸಹಾಯ ಮಾಡುತ್ತಾರೆ. ಅವರ ಸಂಯೋಗದಲ್ಲಿ ಮಕ್ಕಳಿಗೆ ಉಚಿತ ಶಸ್ತ್ರಚಿಕಿತ್ಸೆಯನ್ನು ಶ್ರೀದೇವಿ ಶಿಕ್ಷಣ ಸಂಸ್ಥೆಯ ನೇತ್ರವಿಭಾಗ ಮಾಡುತ್ತದೆ.

ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಮಕ್ಕಳ ಆರೋಗ್ಯ ವಿಭಾಗದ N.I.C.U ನಲ್ಲಿ ದಾಖಲಾದ ಮಕ್ಕಳಿಗೆ ಪ್ರತಿ ಗುರುವಾದ ಬೆಂಗಳೂರಿನ ಪ್ರಭಾ ಐ ಕ್ಲಿನಿಕ್ ಸಯೋಗದಿಂದ RETCAM Camera ಮೂಲಕ ROP ಸ್ಕ್ಯಾನಿಂಗ್ ಮಾಡುವ ಸೌಲಭ್ಯ ಕಲ್ಪಿಸಲಾಗಿದೆ. ಇಂತಹ ಮಕ್ಕಳು ದೀರ್ಘ ಕಾಲ ಐಸಿಯುನಲ್ಲಿದ್ದು ಕೃತಕವಾಗಿ ಆಕ್ಸಿಜಿನ್ ಪಡೆಯುತ್ತಿರುವ ಕಾರಣ ಕಣ್ಣಿಗೆ ಅಪಾಯವಿರುತ್ತದೆ. ಅದನ್ನು ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ನೇತ್ರಶಾಸ್ತ್ರ ವಿಭಾಗ ತೆಗೆದುಕೊಂಡಿರುತ್ತದೆ.

ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಶ್ರಯದಲ್ಲಿ ಉತ್ತಮ ಕಣ್ಣಿನ ಬ್ಯಾಂಕ್ ಸಹ ಇದೆ. ಜೊತೆಗೆ ಗ್ಲೊಕೋಮಾ ಕ್ಲಿನಿಕ್, ರೆಟೀನಾ ಕ್ಲಿನಿಕ್ ಕೂಡಾ ಇವೆ.

# ಹಾಸನದ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಸೈಬರ್ ಕ್ರೈಮ್ ಪರಿಕರಗಳ ಪ್ರದರ್ಶನ

**ಸೈಬರ್ ಕ್ರೈಮ್ ಎನ್ನುವುದು ಕಂಪ್ಯೂಟರ್ ಮತ್ತು ನೆಟ್‌ವರ್ಕ್‌ನ್ನೊಳಗೊಂಡಿರುವ ಅಪರಾಧವಾಗಿದೆ. ಸೈಬರ್ ಕ್ರೈಮ್ ಎನ್ನುವುದು ವಂಚನೆ, ಗುರುತಿನ ಕಳ್ಳತನ ಅಥವಾ ಗೌಪ್ಯತೆಯನ್ನು ಉಲ್ಲಂಘಿಸುವಂತಹ ಅಪರಾಧಗಳನ್ನು ಮಾಡಲು ಕಂಪ್ಯೂಟರ್‌ನ್ನು ಅಸ್ತ್ರವಾಗಿ ಬಳಸುವುದು. ವಾಣಿಜ್ಯ, ಮನರಂಜನೆ ಮತ್ತು ವ್ಯಾಪಾರದಂತಹ ಪ್ರತಿಯೊಂದು ಕ್ಷೇತ್ರಕ್ಕೂ ಇದರ ಬಿಸಿ ತಟ್ಟಿದೆ.**



ತುಮಕೂರಿನ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕರು, ಡೀನ್ ಮತ್ತು ಸೈಬರ್ ಅಪರಾಧದಲ್ಲಿ ಸಾಕಷ್ಟು ಸಂಶೋಧನೆ ನಡೆಸಿ ರಾಜ್ಯದ ಪೊಲೀಸ್ ಇಲಾಖೆಗೆ ಸಂಪನ್ಮೂಲ ವ್ಯಕ್ತಿಗಳಾಗಿರುವ ಡಾ.ಹೆಚ್.ಎ.ದಿನೇಶ್ ಅವರು ಹಾಸನದ ಎಸ್.ಪಿ.ಕಚೇರಿಯಲ್ಲಿ ಸೈಬರ್ ಕುರಿತಂತೆ ಪರಿಕರಗಳೊಡನೆ ಒಂದು ದಿನ ಕಾರ್ಯಗಾರ ನಡೆಸಿಕೊಟ್ಟರು. ಅದರ ವರದಿಯ ಸಾರಾಂಶ ಇಲ್ಲಿದೆ.

ಸೈಬರ್ ಕ್ರೈಮ್ ಎನ್ನುವುದು ಕಂಪ್ಯೂಟರ್ ಮತ್ತು ನೆಟ್‌ವರ್ಕ್‌ನ್ನೊಳಗೊಂಡಿರುವ ಅಪರಾಧವಾಗಿದೆ. ಸೈಬರ್ ಕ್ರೈಮ್ ಎನ್ನುವುದು ವಂಚನೆ, ಗುರುತಿನ ಕಳ್ಳತನ ಅಥವಾ ಗೌಪ್ಯತೆಯನ್ನು ಉಲ್ಲಂಘಿಸುವಂತಹ ಅಪರಾಧಗಳನ್ನು ಮಾಡಲು ಕಂಪ್ಯೂಟರ್‌ನ್ನು ಅಸ್ತ್ರವಾಗಿ ಬಳಸುವುದು. ವಾಣಿಜ್ಯ, ಮನರಂಜನೆ ಮತ್ತು ವ್ಯಾಪಾರದಂತಹ ಪ್ರತಿಯೊಂದು ಕ್ಷೇತ್ರಕ್ಕೂ ಇದರ ಬಿಸಿ ತಟ್ಟಿದೆ. ಇದರಲ್ಲಿ ಕಂಪ್ಯೂಟರ್ ಮುಖ್ಯವಾಗಿರುವುದರಿಂದ ಸೈಬರ್ ಕ್ರೈಮ್ ವಿಶೇಷವಾಗಿ ಇಂಟರ್‌ನೆಟ್ ಮೂಲಕ ನಡೆಯುತ್ತದೆ.

ಸೈಬರ್ ಅಪರಾಧವು ವ್ಯಕ್ತಿ, ರಾಷ್ಟ್ರದ ಭದ್ರತೆ ಮತ್ತು ದೇಶದ ಆರ್ಥಿಕತೆಗೆ ಅಪಾಯವನ್ನುಂಟುಮಾಡುತ್ತದೆ. ಸೈಬರ್ ಕ್ರೈಮ್ ತನಿಖೆಯು ಕಂಪ್ಯೂಟರ್ ಆಧಾರಿತ ಅಪರಾಧ ಮತ್ತು ಸೈಬರ್ ಸ್ಪೇಸ್‌ನಲ್ಲಿ ಸಂಭವಿಸುವ ದುರುದ್ದೇಶಪೂರಿತ ವಂಚನೆಗಳನ್ನು ಪತ್ತೆ ಹಚ್ಚುವ ಚಟುವಟಿಕೆಯಾಗಿದೆ. ಅದನ್ನು ಗುರುತಿಸುವ, ವಿಶ್ಲೇಷಿಸುವ ಮತ್ತು ತಗ್ಗಿಸುವ ಪ್ರಕ್ರಿಯೆ ನಡೆಯುತ್ತಿದೆ. ಹ್ಯಾಕಿಂಗ್, ಫಿಶಿಂಗ್, ಮಾಲ್‌ವೇರ್, ಡೇಟಾ ಉಲ್ಲಂಘನೆ ಮತ್ತು ಗುರುತಿನ ಕಳ್ಳತನದಂತಹ ವಿವಿಧ ರೀತಿಯ ಸೈಬರ್ ಅಪರಾಧಗಳನ್ನು ತನಿಖೆ ಮಾಡಲು ವಿಶೇಷ ಪರಿಕರ ಮತ್ತು ತಂತ್ರಗಳನ್ನು ಬಳಕೆ ಮಾಡಲಾಗುತ್ತದೆ.

ತನಿಖಾ ಪ್ರಕ್ರಿಯೆಯನ್ನು ಸೈಬರ್ ಅಪರಾಧ ತನಿಖಾಧಿಕಾರಿಗಳು ನಡೆಸುತ್ತಾರೆ, ಅವರು ಸಂಪೂರ್ಣ ಮತ್ತು ನಿಖರವಾದ ತನಿಖೆಗಳನ್ನು ನಡೆಸುವುದು, ಸಾಕ್ಷ್ಯವನ್ನು ಸಂರಕ್ಷಿಸುವುದು ಮತ್ತು ಸೈಬರ್ ಅಪರಾಧಿಗಳನ್ನು ನ್ಯಾಯಾಲಯಕ್ಕೆ ತರಲು ಕಾನೂನು ಜಾರಿ ಸಂಸ್ಥೆಗಳೊಂದಿಗೆ ಸಹಕರಿಸುತ್ತಾರೆ. ಸೈಬರ್ ಕ್ರೈಮ್ ಹೆಚ್ಚುತ್ತಿರುವ ಬೆದರಿಕೆಯಿಂದ ರಕ್ಷಿಸಲು ಮತ್ತು ಸೈಬರ್ ಕ್ರೈಮ್‌ಗಳಿಗೆ ಬಲಿಪಶುಗಳಾದವರಿಗೆ ನ್ಯಾಯ ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ವ್ಯಾಪಾರಗಳಿಗೆ ಮತ್ತು ವ್ಯಕ್ತಿಗಳಿಗೆ ಸಹಾಯ ಮಾಡಲು ತನಿಖೆ ಅತ್ಯಗತ್ಯ. ಸೈಬರ್ ಕ್ರೈಮ್ ತನಿಖೆಯ ಪ್ರಾಮುಖ್ಯತೆಯನ್ನು ಎಷ್ಟು ಹೇಳಿದರೂ ಸಾಲದು, ಏಕೆಂದರೆ ಇಂದು ಸೈಬರ್ ಅಪರಾಧವು ವಿಕಸನಗೊಳ್ಳುತ್ತಲೇ ಇದೆ. ಸೈಬರ್ ಕ್ರೈಮ್ ಪ್ರಪಂಚದಾದ್ಯಂತ ವ್ಯವಹಾರಗಳು, ಸರ್ಕಾರಗಳು ಮತ್ತು ವ್ಯಕ್ತಿಗಳಿಗೆ ಗಮನಾರ್ಹ ಅಪಾಯವನ್ನು ಉಂಟುಮಾಡುತ್ತದೆ.

ಸೈಬರ್ ಕ್ರೈಮ್ ತನಿಖೆಯು ಒಂದು ಸಂಪೂರ್ಣ ಮತ್ತು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಕ್ಷೇತ್ರವಾಗಿದೆ, ಏಕೆಂದರೆ ಹೊಸ ಬೆದರಿಕೆ ಮತ್ತು ತಂತ್ರಜ್ಞಾನಗಳು ಹೊರಹೊಮ್ಮುತ್ತವೆ. ಪರಿಣಾಮವಾಗಿ, ಸೈಬರ್ ಅಪರಾಧಗಳನ್ನು ಪರಿಣಾಮಕಾರಿಯಾಗಿ ತನಿಖೆ ಮಾಡಲು ಮತ್ತು ಅಪರಾಧಗಳನ್ನು ತಗ್ಗಿಸಲು ತನಿಖಾಧಿಕಾರಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ಸಾಧನಗಳೊಂದಿಗೆ ನವೀಕೃತವಾಗಿರಬೇಕು. ಸೈಬರ್ ಕ್ರೈಮ್ ತನಿಖಾಧಿಕಾರಿಗಳು ಕಂಪ್ಯೂಟರ್ ಸಂಬಂಧಿತ ಅಪರಾಧಗಳ ತನಿಖೆಯಲ್ಲಿ ಪರಿಣತಿ ಹೊಂದಿರುವುದರ ಜೊತೆಗೆ ಕಾನೂನಿನ ಜ್ಞಾನ ಸಹ ಅಗತ್ಯವಾಗಿರುತ್ತದೆ. ವೃತ್ತಿಪರ ತನಿಖಾಧಿಕಾರಿಗಳು ಪುರಾವೆಗಳನ್ನು ಸಂಗ್ರಹಿಸಲು ಮತ್ತು ಶಂಕಿತರನ್ನು ಗುರುತಿಸಲು ಕಂಪ್ಯೂಟರ್ ವಿಜ್ಞಾನ, ಕಾನೂನು ಮತ್ತು ತಂತ್ರಜ್ಞಾನದ ಅಗತ್ಯವಿದೆ.

ಸೈಬರ್ ಕ್ರೈಮ್ ತನಿಖಾಧಿಕಾರಿಗಳು ಕಾನೂನು ಜಾರಿ ಸಂಸ್ಥೆಗಳು, ಖಾಸಗಿ ಕಂಪನಿಗಳು ಮತ್ತು ಸರ್ಕಾರಿ ಏಜೆನ್ಸಿಗಳು ಸೇರಿದಂತೆ ವಿವಿಧ ಸಂಸ್ಥೆಗಳಿಗೆ ಕೆಲಸ ಮಾಡಬಹುದು. ಸೈಬರ್‌ಕ್ರೈಮ್ ತನಿಖೆಯ ಗುರಿ ಅಪರಾಧದ ಮೂಲವನ್ನು ಗುರುತಿಸುವುದು, ಸಾಕ್ಷ್ಯವನ್ನು ಸಂಗ್ರಹಿಸುವುದು ಮತ್ತು ಅಪರಾಧಿಯನ್ನು ವಿಚಾರಣೆಗೆ ನ್ಯಾಯಾಲಯಕ್ಕೆ ತಂದು ಅಲ್ಲಿ ಸಾಕ್ಷ್ಯವನ್ನು ಪ್ರಸ್ತುತಪಡಿಸುವುದು.

ಸೈಬರ್ ಕ್ರೈಮ್ ಅಧಿಕಾರಿಗಳು ಹ್ಯಾಕಿಂಗ್, ಗುರುತಿನ ಕಳ್ಳತನ, ವಂಚನೆ ಮತ್ತು ಇತರ ರೀತಿಯ ಸೈಬರ್–ಸಂಬಂಧಿತ ಅಪರಾಧಗಳಂತಹ ಸೈಬರ್ ಕ್ರೈಮ್ ಘಟನೆಗಳನ್ನು ತನಿಖೆ ಮಾಡುವ ಮತ್ತು ವಿಶ್ಲೇಷಿಸುವ ಕೆಲಸ ಮಾಡುತ್ತಾರೆ. ಅಪರಾಧಿಗಳನ್ನು ಗುರುತಿಸಲು ಮತ್ತು ಕಾನೂನು ಕ್ರಮಕ್ಕೆ ಪುರಾವೆಗಳನ್ನು ಸಂಗ್ರಹಿಸಲು, ಸೈಬರ್ ಫೋರೆನ್ಸಿಕ್ಸ್ ತನಿಖಾ ತಂತ್ರಗಳು ಬೇಡಿಕೆಯಲ್ಲಿವೆ, ಇದು ಎಲೆಕ್ಟ್ರಾನಿಕ್ ಸಾಧನದಿಂದ ಪುರಾವೆಗಳನ್ನು ಗುರುತಿಸಲು ಮತ್ತು ಸಂಗ್ರಹಿಸಲು ಸಹಾಯ ಮಾಡುತ್ತದೆ. ಇಂತಹ ವೇದಿಕೆಗಳಲ್ಲಿ ಈ ಬಗ್ಗೆ ತರಬೇತಿ ನೀಡುವುದು ನಿಜವಾಗಿಯೂ ಸವಾಲಿನ ವಿಷಯ.

2024ರ ಮಾರ್ಚ್ 24 ರಂದು ಹಾಸನದ ಎಸ್. ಪಿ. ಕಛೇರಿಯಲ್ಲಿ ಕಾರ್ಯಗಾರ ಏರ್ಪಡಿಸಲಾಗಿತ್ತು. ಅದರಲ್ಲಿ ಕಂಪ್ಯೂಟರ್ ಸೈನ್ಸ್ (ಸೈಬರ್ ಸೆಕ್ಯುರಿಟಿ) ವಿಭಾಗದ ಪ್ರಾಧ್ಯಾಪಕ ಡಾ.ದಿನೇಶ ಹೆಚ್.ಎ. ಮತ್ತು ಡೀನ್ (ಸಂಶೋಧನೆ ಮತ್ತು ಅಭಿವೃದ್ಧಿ) ಅವರು ಭಾಗವಹಿಸಿದ್ದರು. ಆ ಕಾರ್ಯಗಾರದಲ್ಲಿ ಸೈಬರ್‌ಕ್ರೈಮ್‌ನ ವಿಚಾರಗಳನ್ನು ಪ್ರಸ್ತಾಪಿಸಲಾಯಿತು. ಅವುಗಳೆಂದರೆ ಸೈಬರ್ ಕ್ರೈಮ್ ವರ್ಗೀಕರಣ, ಸೈಬರ್‌ಕ್ರೈಮ್ ಶಸ್ತ್ರಾಸ್ತ್ರಗಳು, ಸೈಬರ್ ಕ್ರೈಮ್ ಘಟನೆಯನ್ನು ಹೇಗೆ ವಿಶ್ಲೇಷಿಸುವುದು, ಸೈಬರ್‌ಕ್ರೈಮ್ ತನಿಖೆಗೆ ವಿವಿಧ ಮೂಲಗಳು, ಸೈಬರ್ ಕ್ರೈಮ್, ಅಸ್ತಿತ್ವದಲ್ಲಿರುವ ಸೈಬರ್ ಕ್ರೈಮ್‌ನ ಫೋರೆನ್ಸಿಕ್, ತನಿಖಾ ಪರಿಕರಗಳು ಮತ್ತು ಸಾಫ್ಟ್‌ವೇರ್ ಅನ್ನು ತನಿಖೆ ಮಾಡಲು ಪ್ರಮಾಣಿತ ಕಾರ್ಯಾಚರಣಾ ವಿಧಾನ. ಅನಾಮಧೇಯ ಇಮೇಲ್ ಮೂಲವನ್ನು ವಿಶ್ಲೇಷಿಸಲು ಇಮೇಲ್ ಫೋರೆನ್ಸಿಕ್ ತಂತ್ರ. ಮೊಬೈಲ್ ಫೋರೆನ್ಸಿಕ್ಸ್ ಅನ್ನು ಬಳಸಿಕೊಂಡು, ಸ್ಮಾರ್ಟ್ ಫೋನ್ ಕರೆ ಲಾಗ್‌ಗಳು ಮತ್ತು ವಿಷಯಗಳ ವಿಶ್ಲೇಷಣೆ, ಲಾಕ್ ಮಾಡಿದ ಕಂಪೂಟರ್‌ನಿಂದ ಪಾಸ್‌ವರ್ಡ್ ಮರುಪಡೆಯುವಿಕೆ, ಲಾಕ್ ಮಾಡಿದ ಮೊಬೈಲ್‌ನಿಂದ ಮಾದರಿ ಮರುಪಡೆಯುವಿಕೆ ಮತ್ತು ಸಾಮಾಜಿಕ ಮಾಧ್ಯಮ ನಕಲಿ ಪ್ರೊಫೈಲ್, ಸುಳ್ಳು ಪೋಸ್ಟ್‌ರ್‌ಗಳು ಮತ್ತು ನಕಲಿ ಸುದ್ದಿ ಮಾನಿಟರಿಂಗ್ ಮುಂತಾದವುಗಳು.

ಈ ಕಾರ್ಯಾಗಾರದಲ್ಲಿ ನೂರಕ್ಕೂ ಹೆಚ್ಚು ಅಧಿಕಾರಿಗಳು ವಿವಿಧ ಹುದ್ದೆಯ ಇನ್ವೆಸ್ಟಿಗೇಷನ್ ಆಫೀಸರ್, ಸರ್ಕಲ್ ಇನ್ಸ್‌ಪೆಕ್ಟರ್, ಡಿವೈಎಸ್ಪಿ, ಮತ್ತು ವಿಶೇಷ ಪೋಲೀಸರು ಭಾಗವಹಿಸಿದ್ದರು ಹೆಚ್ಚುವರಿ ಎಸ್ ಪಿ. ಅವರು ತಮ್ಮ ಭಾಷಣದಲ್ಲಿ ಡಾ. ದಿನೇಶ ಹೆಚ್ ಎ ಅವರು ತೋರಿಸದ ಪ್ರಾತ್ಯಕ್ಷಿಕೆ ಹಾಗೂ ವಿಷಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಆನ್‌ಲೈನ್ ಹಣಕಾಸು ವಂಚನೆಗಳನ್ನು ತ್ವರಿತವಾಗಿ ಪರಿಹರಿಸಲು "ಗೋಲ್ಡನ್ ಅವರ್"/1930 ಗೆ ಕರೆ ಮಾಡಿ ಹೆಚ್ಚಿನ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ಕರೆ ಕೊಟ್ಟರು.

ಸೈಬರ್ ಕ್ರೈಮ್ ಮತ್ತು ಸೈಬರ್ ವಂಚನೆಗಳ ಬಗ್ಗೆ ತಮ್ಮ ಅಧಿಕಾರ ವ್ಯಾಪ್ತಿಯ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಎಲ್ಲಾ ಠಾಣೆಯ ಮುಖ್ಯಸ್ಥರಿಗೆ ಸೂಚಿಸಲಾಯಿತು. ಅವರು ಸೈಬರ್ ಕ್ರೈಮ್ ಕೇಸ್ ಫಿಲ್ಲಿಂಗ್ ಸ್ಕ್ವಾಡ್ ಆಪರೇಟಿಂಗ್ ವಿಧಾನವನ್ನು ಬಿಡುಗಡೆ ಮಾಡಿದರು. ಅಧಿಕೃತವಾಗಿ ಭಾಗವಹಿಸಿದ್ದ ಎಲ್ಲರಿಗೂ ಅದನ್ನು ಅನುಸರಿಸಲು ತಿಳಿಸಲಾಯಿತು. ಡಾ. ದಿನೇಶ ಹೆಚ್. ಎ. ಪ್ರದರ್ಶಿಸಿದ 'ಫೊರೆನ್ಸಿಕ್ ಉಪಕರಣಗಳು ಮತ್ತು ಸಾಫ್ಟ್‌ವೇರ್' ಅನ್ನು ಹೆಚ್ಚುವರಿ ಎಸ್ ಪಿ. ಕೆ ಎಸ್ ವೆಂಕಟೇಶ್ ನಾಯ್ಡು ಅವರು ಮೆಚ್ಚುಗೆ ವ್ಯಕ್ತಪಡಿಸಿ, ಡಾ.ದಿನೇಶ್ ಅವರಿಗೆ ಕೃತಜ್ಞತೆ ಸಲ್ಲಿಸಿದರು.

■ ವಿಶೇಷ ವರದಿ

# ವಿಶ್ವಾತ್ಮಕ ಪ್ರೀತಿಯ ಸಂದೇಶ ಬಿತ್ತುತ್ತಿರುವ ಶ್ರೀಸಾಯಿ ಕೌಸ್ತವ್



▪ ವೆಂಕಟೇಶ್ ಪ್ರಸಾದ್ ಬಿ.ಎಸ್.
ಪತ್ರಕರ್ತರು
99023 38906


ಅವರು ಶೇಕಡ 90ಕ್ಕೂ ಹೆಚ್ಚಿನ ಮಟ್ಟದ ವಿಶೇಷಚೇತನರು. ಎಷ್ಟರಮಟ್ಟಿಗೆ ಎಂದರೆ, ತಮ್ಮ ಇಡೀ ದೇಹದಲ್ಲಿ ಕೇವಲ ಕುತ್ತಿಗೆ, ಮುಖದ ಸ್ನಾಯು ಹಾಗೂ ಎಡಗೈನ ಎರಡು ಬೆರಳುಗಳನ್ನು ಬಿಟ್ಟರೆ ಬೇರೆ ಯಾವ ಅಂಗವನ್ನೂ ಒಂದಿಷ್ಟೂ ಕದಲಿಸಲಾರರು. ಆದರೆ, ಇಂತಹ ಬಾಧೆಗೆ ಕೂಡ ಅವರ ಮುಖದಲ್ಲಿನ ಮಂದಹಾಸವನ್ನು ಕುಂದಿಸಲು ಸಾಧ್ಯವಾಗಿಲ್ಲ. ಈ ಚಲನರಹಿತತೆಗೆ ಅವರ ಸೃಜನಶೀಲತೆ ಮತ್ತು ಕ್ರಿಯಾಶೀಲತೆಗೆ ಭಂಗ ತರಲು ಆಸ್ಪದವಾಗಿಲ್ಲ!

ಹೌದು. ಇವರು ಕೌಸ್ತವ್ ದಾಸಗುಪ್ತಾ. ಮೂಲತಃ ಪಶ್ಚಿಮ ಬಂಗಾಳದ ಸಿಲಿಗುರಿ ಜಿಲ್ಲೆಯವರು. ಹುಟ್ಟಿದ್ದು, ಕೌಶಿಕ್ ದಾಸಗುಪ್ತಾ-ಶೀಲಾ ದಂಪತಿಯ ದೊಡ್ಡ ಮಗನಾಗಿ 1991ರಲ್ಲಿ. ತಂದೆ ವೃತ್ತಿಯಿಂದ ಪತ್ರಿಕಾ ಛಾಯಾಗ್ರಾಹಕರು. ತಾಯಿ ಶಾಸ್ತ್ರೀಯ ಸಂಗೀತ ಜ್ಞಾನವುಳ್ಳ ಗೃಹಿಣಿ.

ಇಂತಹ ಕುಟುಂಬದ ಹಿನ್ನೆಲೆಯ ಕೌಸ್ತವ್ ಬಾಲ್ಯದಿಂದಲೇ ಪ್ರತಿಭಾವಂತರಾಗಿದ್ದರು. ಮೂರು ವರ್ಷವಾಗುವ ಮೊದಲೇ ನೋಡಿದ ನೃತ್ಯದ ಮಟ್ಟುಗಳನ್ನು ಅನುಕರಿಸುತ್ತಿದ್ದರಂತೆ.

ಇಂತಹ ಕೌಸ್ತವ್‌ಗೆ ಎಳೆಯ ಕೂಸಾಗಿದ್ದಾಗಲೇ ಆರೋಗ್ಯ ಸಮಸ್ಯೆ ಕಂಡುಬಂದಿತ್ತು. ಅವರ ತಾಯಿ ಹೇಳುವಂತೆ, ಕೌಸ್ತವ್‌ಗೆ ಮೂರುವರೆ ತಿಂಗಳ ಮಗುವಾಗಿದ್ದಾಗಲೇ ಒಮ್ಮೆ ಮೂಳೆ ಮುರಿತವಾಗಿತ್ತಂತೆ. ಅದಾದ ಮೇಲೆ, ಅವರಿಗೆ ಆರೇಳು ವರ್ಷವಾಗುವಷ್ಟರಲ್ಲಿ ಏನಿಲ್ಲವೆಂದರೂ 30ಕ್ಕೂ ಹೆಚ್ಚು ಸಲ ಮೂಳೆಮುರಿತಗಳು ಆಗಿದ್ದವು.

ಇದೇ ವೇಳೆ, ಕೌಸ್ತವ್‌ಗೆ ಎಳೆಯ ಪ್ರಾಯದಲ್ಲೇ ಇದ್ದ ನೃತ್ಯಾಸಕ್ತಿಯನ್ನು ಪೋಷಿಸಲು ಅವರ ತಂದೆ ತಾಯಿ





ಶಾಸ್ತ್ರೀಯವಾಗಿ ಕಥಕ್ ಕಲಿಸವುದಕ್ಕೂ ವ್ಯವಸ್ಥೆ ಮಾಡಿದ್ದರು. ಆದರೆ, ಪದೇ ಪದೇ ಮೂಳೆಮುರಿತ ಉಂಟಾಗುತ್ತಿದ್ದುದರಿಂದ ಅದನ್ನು ಎರಡು ಮೂರು ವರ್ಷಗಳ ನಂತರ ಮುಂದುವರಿಸಲು ಸಾಧ್ಯವಾಗದ ಪರಿಸ್ಥಿತಿ ಬಂತು.

ಅದರ ಜೊತೆಗೆ ಎಳೆಯ ವಯಸ್ಸಿನಲ್ಲೇ ಅವರು ಒಳ್ಳೆಯ ಹಾಡುಗಾರರಾಗಿದ್ದರು. ಪಶ್ಚಿಮ ಬಂಗಾಳದ ಪತ್ರಕರ್ತರ ಸಂಘವು ಉತ್ತಮ ಬಾಲಗಾಯಕರನ್ನು ಗುರುತಿಸಿ ನೀಡುವ "ದಿಶಾರಿ" ಪ್ರಶಸ್ತಿಗೆ ಪಾತ್ರರಾದವರು. ಚಿಕ್ಕವಯಸ್ಸಿನಲ್ಲೇ ಶ್ರೇಷ್ಠ ಗಾಯಕರಾದ ಉಸ್ತಾದ್ ರಷೀದ್ ಖಾನ್, ಅನುರಾಧಾ ಪೌಡ್ವಾಲ್, ಭಜನ್ ಸಾಮ್ರಾಟ ಅನೂಪ್ ಜಲೋಟಾ ಅವರ ಮುಂದೆ ಹಾಡಿ ಗಮನ ಸೆಳೆದವರು. ಬಾಲಕನಾಗಿದ್ದಾಗಲೇ ಎರಡು ಸಂಗೀತದ ಆಲ್ಬಮ್‌ಗಳನ್ನು ಹೊರತಂದ ಹಿರಿಮೆ ಅವರದ್ದಾಗಿದೆ.

ಕೌಸ್ತವ್ ಬೆಳೆಯುತ್ತಾ ಹೋದಂತೆ ಮೂಳೆಮುರಿತದ ಸಮಸ್ಯೆ ತೀವ್ರವಾಗುತ್ತಾ ಹೋಯಿತು. ವೈದ್ಯಕೀಯ ಪರಿಭಾಷೆಯಲ್ಲಿ ಅದಕ್ಕೆ "ಆಸ್ಟಿಯೋ ಜೆನೆಸಿಸ್ ಇಂಪರ್ಫೆಕ್ಟಾ" ಎನ್ನಲಾಗುತ್ತದೆ. ಅಂದರೆ, ಪೆಡಸುಮೂಳೆ ಬಾಧೆ (ಬ್ರಿಟಲ್ ಬೋನ್ ಡಿಸೀಸ್) ಎಂದರ್ಥ. ಇದು ಎಷ್ಟು ತೀವ್ರ ಸಮಸ್ಯೆ ತಂದೊಡ್ಡುತ್ತದೆ ಎಂದರೆ ವ್ಯಕ್ತಿಯ ಅರಿವಿಗೇ ಬಾರದಂತೆ ಮೂಳೆಮುರಿತ ಆಗುತ್ತಿರುತ್ತದೆ. ಕೆಲವೊಮ್ಮೆ, ಎದುರಿನ ವ್ಯಕ್ತಿ, ಸಾಧಾರಣವಾಗಿ ಕೈಕುಲುಕಿದರೂ ಸಾಕು ಮೂಳೆ ಮುರಿದುಬಿಡುತ್ತದೆ. ಹೆಗಲ ಮೇಲೋ, ಭುಜದ ಮೇಲೋ ಗೊತ್ತಿಲ್ಲದೆ ಕೈ ಹಾಕಿದರೂ ಮೂಳೆ ಮುರಿದುಬಿಡಬಹುದು. ಕೌಸ್ತವ್‌ಗೆ ಒಮ್ಮೆ ಶಾಲೆಯಲ್ಲಿ ಪಕ್ಕದಲ್ಲಿ ಕೂರುತ್ತಿದ್ದ ಸಹಪಾಠಿ ಏನೋ ಕಾರಣಕ್ಕೆ ತೊಡೆ ಮುಟ್ಟಿದ್ದಕ್ಕೆ ಮೂಳೆ ಮುರಿತವಾಗಿತ್ತಂತೆ! ಅಂದಹಾಗೆ, ಕೌಸ್ತವ್‌ಗೆ 12 ವರ್ಷವಾಗುವ ವೇಳೆಗೆ ಏನಿಲ್ಲವೆಂದರೂ 50 ಸಲ ಮೂಳೆ ಫ್ರಾಕ್ಚರ್‌ಗಳು ಆಗಿದ್ದವು!

ಈ ಬಾಧೆಯ ಜೊತೆಗೆ ಒಮ್ಮೆ ಕೌಸ್ತವ್‌ಗೆ ತೊಡೆಯಲ್ಲಿ ಗೆಡ್ಡೆಯೊಂದು ಕಾಣಿಸಿಕೊಂಡಿತು. ಮೊದಲಿಗೆ, ವೈದ್ಯರು ಅದನ್ನು ಮಾರಣಾಂತಿಕವಾದ ಕ್ಯಾನ್ಸರ್ ಗೆಡ್ಡೆ ಇರಬೇಕೆಂದು ಶಂಕಿಸಿದ್ದರು. ಆದರೆ, ಕೌಸ್ತವ್ ಮಾತ್ರವಲ್ಲದೆ ಸ್ವತಃ ವೈದ್ಯರುಗಳೇ ಅಚ್ಚರಿಪಡುವಂತೆ, ಅನಂತರದ ರೋಗ ದೃಢೀಕರಣ ಪರೀಕ್ಷೆಗಳಲ್ಲಿ ಅದು ಕ್ಯಾನ್ಸರ್ ಗೆಡ್ಡೆಯಲ್ಲ ಎಂಬುದು ಖಚಿತವಾಯಿತು. ತಾವು ಆ ದಿನಗಳಲ್ಲಿ ಆ ಗೆಡ್ಡೆಯಿಂದ ಅನುಭವಿಸಿದ ತೀವ್ರ ನೋವು, ಯಾತನೆ, ದುಗುಡ, ಆತಂಕಗಳನ್ನು ನೆನೆಯುವ ಕೌಸ್ತವ್, ಮೊದಲಿಗೆ ಕ್ಯಾನ್ಸರ್ ಗೆಡ್ಡೆ ಎಂಬಂತೆ ಗೋಚರಿಸಿದ್ದ ಆ ಗೆಡ್ಡೆ ನಂತರ ಅದು ಹೇಗೆ ನಾಪತ್ತೆಯಾಯಿತು ಎಂಬುದೇ ಒಂದು ಪವಾಡವೆನ್ನಿಸುತ್ತದೆ ಎನ್ನುತ್ತಾರೆ.

ಇಂತಹ ಕೌಸ್ತವ್ ಅವರು ಪುಟ್ಟಪರ್ತಿ ಶ್ರೀ ಸಾಯಿಬಾಬಾ ಅವರ ಪರಮ ಅನುಯಾಯಿಯಾಗಿದ್ದಾರೆ. ಐದು ವರ್ಷದ ಹುಡುಗನಾಗಿದ್ದಾಗಲೇ ಬಾಬಾ ಅವರ ಸ್ಪರ್ಶದಿಂದಾಗಿ ನನಗೆ ಒಂದು ರೀತಿಯ ರೋಮಾಂಚನ ಅನುಭವವಾಗಿತ್ತು ಎನ್ನುತ್ತಾರೆ ಅವರು. "ದಿಶಾರಿ" ಬಾಲಗಾಯಕ ಪ್ರಶಸ್ತಿ ಬಂದಾಗಲೂ ಅವರು ಪುಟ್ಟಪರ್ತಿಗೆ ಬಂದು ಸ್ವಾಮಿ ದರ್ಶನ ಪಡೆದಿದ್ದರು. ಮುಂದೆ, ಅವರಿಗೆ ಸುಮಾರು 15 ವರ್ಷವಾಗುವ ಹೊತ್ತಿಗೆ ಎರಡೂ ತೊಡೆಯ ಮೂಳೆಗಳು ಮುರಿದು ನಡೆಯಲಾಗದ ಸ್ಥಿತಿ ಉಂಟಾಯಿತು. ಈ ಸಮಸ್ಯೆಗೆ ಸೂಕ್ತ ಚಿಕಿತ್ಸೆ ನೀಡುವ ವೈದ್ಯರು ಎಲ್ಲಿದ್ದಾರೋ ಎಂದು ತಂದೆ- ತಾಯಿ ಯೋಚನೆಯಲ್ಲಿರುವಾಗ ಅವರಿಗೆ ಪುಟ್ಟಪರ್ತಿ ಆಸ್ಪತ್ರೆಯ ತಜ್ಞರಿಗೆ ತೋರಿಸುವಂತೆ ಹಿತೈಷಿಯೊಬ್ಬರು ಸಲಹೆ ನೀಡುತ್ತಾರೆ. ಅದರಂತೆ, ಪುಟ್ಟಪರ್ತಿಗೆ ಬಂದ ಕುಟುಂಬ ಕೊನೆಗೆ ತಮ್ಮ ವಾಸಸ್ಥಳವನ್ನು ಪುಟ್ಟಪರ್ತಿಗೇ ಸ್ಥಳಾಂತರಿಸಿತು.



ಅನೇಕ ಕಷ್ಟಕೋಟಲೆಗಳ ನಡುವೆಯೂ ಕೌಸ್ತವ್ ಅವರಿಗೆ ಸಾಯಿಬಾಬಾ ಅವರೆಡೆಗಿನ ಸೆಳೆತ ತೀವ್ರವಾಗುತ್ತಾ ಹೋಗುತ್ತದೆ. ಬಾಬಾ ಅವರನ್ನು ಸ್ತುತಿಸುವ ಭಜನೆಗಳನ್ನು ರಚಿಸಿ ಸಂಗೀತ ಸಂಯೋಜಿಸುತ್ತಾರೆ. ಕೌಸ್ತವ್ ಅವರಿಗೆ ಸಾಯಿಬಾಬಾ ಅವರೇ ತನ್ನ ಮೂಲಕ ಈ ಭಜನಾ ಕೃತಿಗಳನ್ನು ಹೊರಹೊಮ್ಮಿಸುತ್ತಿದ್ದಾರೆ ಎಂಬ ಭಾವನೆ ಗಾಢವಾಗುತ್ತಾ ಹೋಗುತ್ತದೆ. ಶ್ರೀ ಸಾಯಿಬಾಬಾ ಅವರು ತಮ್ಮ ವಿಶ್ವಾತ್ಮಕ ಪ್ರೀತಿಯ ಸಂದೇಶವನ್ನು ಸಾರಲು ತನ್ನನ್ನು ಸಾಧನವಾಗಿ ಆಯ್ಕೆ ಮಾಡಿಕೊಂಡಿದ್ದಾರೆ ಎಂಬ ನಂಬಿಕೆ ಬಲವಾಗುತ್ತದೆ. ಜೊತೆಗೆ, ತಾನು ಯಾವ ಕೆಲಸ ಮಾಡಿದರೂ ಆ ಮೂಲಕ ಶ್ರೀ ಸಾಯಿ ಅವರ ಪ್ರೀತಿಯ ಸಂದೇಶ ಪಸರಿಸುದೇ ತನ್ನ ಬದುಕಿನ ಧ್ಯೇಯವಾಗಬೇಕು ಎಂದು ಕೌಸ್ತವ್ ದೃಢಸಂಕಲ್ಪ ಮಾಡುತ್ತಾರೆ. ಮುಂದುವರಿದು, ಕೌಸ್ತವ್ ದಾಸಗುಪ್ತಾ ಆಗಿದ್ದ ಅವರು ತಮ್ಮ ಹೆಸರನ್ನು ಶ್ರೀ ಸಾಯಿ ಕೌಸ್ತವ್ ದಾಸಗುಪ್ತಾ ಎಂದು ಬದಲಿಸಿಕೊಳ್ಳುತ್ತಾರೆ.

ಗಾಯಕನಾಗಿದ್ದ ಕೌಸ್ತವ್‌ಗೆ ಮುಂದೆ ಧ್ವನಿಯಲ್ಲಾದ ಬದಲಾವಣೆಯಿಂದಾಗಿ ಹಾಡುಗಾರಿಕೆ ಮುಂದುವರಿಸುವುದು ಕಷ್ಟವಾಗುತ್ತದೆ. ನಂತರ ಅವರು ತಮ್ಮ ಆಸಕ್ತಿಯನ್ನು ಗ್ರಾಫಿಕ್ ವಿನ್ಯಾಸದೆಡೆಗೆ ಹೊರಳಿಸಿಕೊಳ್ಳುತ್ತಾರೆ. ಈಗ ಅವರು ಅದರಲ್ಲಿ ಎಷ್ಟು ನಿಪುಣರಾಗಿದ್ದಾರೆ ಎಂದರೆ, ಕೇವಲ ಎರಡು ಬೆರಳುಗಳ ಚಲನೆಯಿಂದಲೇ ಆಕರ್ಷಕ ವಿನ್ಯಾಸಗಳನ್ನು ಮಾಡಬಲ್ಲರು. ವರ್ಚುಯಲ್ ಕೀ ಬೋರ್ಡ್ ಬಳಸಿ ಕಂಪ್ಯೂಟರಿನಲ್ಲಿ ವೇಗವಾಗಿ ಟೈಪಿಸಬಲ್ಲರು. ಪುಟ್ಟಪರ್ತಿಯ ರೇಡಿಯೋಸಾಯಿ ತಂಡದ ಸದಸ್ಯರಾಗಿಯೂ ಅವರು ಕೆಲಸ ಮಾಡುತ್ತಿದ್ದಾರೆ.



ಪುಟ್ಟಪರ್ತಿಯಲ್ಲಿ ಕೆಲವಾರು ವರ್ಷಗಳ ಕಾಲ ನೆಲೆಸಿದ್ದ ಕೌಸ್ತವ್ ಅವರು ಸದ್ಯ ಬೆಂಗಳೂರಿನ ಮಹದೇವಪುರದಲ್ಲಿ ನೆಲೆಸಿದ್ದಾರೆ. ವಿಶೇಷಚೇತನರ ಸಬಲೀಕರಣಕ್ಕಾಗಿ ನೀಡುತ್ತಿರುವ ಕೊಡುಗೆಗೆ ರಾಷ್ಟ್ರಪತಿಯವರ ಪುರಸ್ಕಾರ ಸೇರಿದಂತೆ ಹಲವು ಮನ್ನಣೆಗಳು ಅವರಿಗೆ ಸಂದಿವೆ.

ಆರೋಗ್ಯ ಕೈಕೊಡದಂತೆ ಮುಂಜಾಗ್ರತೆ ವಹಿಸುವುದು ಮುಖ್ಯ. ಆದರೆ, ಎಲ್ಲ ಪ್ರಯತ್ನಗಳನ್ನೂ ಮೀರಿ ಅನಾರೋಗ್ಯ ಪೀಡಿಸುವಾಗ ಜೀವನೋತ್ಸಾಹ ಕುಂದದಂತಹ ಮನೋಧರ್ಮ ರೂಢಿಸಿಕೊಳ್ಳುವುದು ಅದಕ್ಕಿಂತ ಮುಖ್ಯ. ಶ್ರೀ ಸಾಯಿ ಕೌಸ್ತವ್ ಅವರ ಬದುಕು ಇದಕ್ಕೊಂದು ಅತ್ಯುತ್ತಮ ನಿದರ್ಶನ.

### ವ್ಹೀಲ್ ಚೇರ್ ಯೋಧರಾಗಿ ಜನಜಾಗೃತಿ

ತಾವು ಮಾಡುವ ಪ್ರತಿಯೊಂದು ಕೆಲಸವೂ ಭಗವಾನ್ ಶ್ರೀ ಸಾಯಿಬಾಬಾ ಅವರ ವಿಶ್ವಾತ್ಮಕ ಪ್ರೀತಿಯ ಸಂದೇಶವನ್ನು ಪಸರಿಸುವ ಪ್ರಯತ್ನವಾಗಿರುತ್ತದೆ ಎಂದು ಭಾವಿಸುವ ಶ್ರೀ ಸಾಯಿ ಕೌಸ್ತವ್ ಅವರು, ಕೆಲವಾರು ವರ್ಷಗಳಿಂದ 'ಸರ್ವಮಾನ್ಯ ವಿನ್ಯಾಸ'ದ (ಯೂನಿವರ್ಸಲ್ ಡಿಸೈನ್) ಬಗೆಗೆ ಜಾಗೃತಿ ಮೂಡಿಸುವಲ್ಲಿಯೂ ಕೊಡುಗೆ ನೀಡುತ್ತಿದ್ದಾರೆ. ಅಂದರೆ, ದೇವಸ್ಥಾನಗಳು, ಮಾಲ್‌ಗಳು, ರೆಸ್ಟೋರೆಂಟ್‌ಗಳು ಹೋಟೆಲ್‌ಗಳು, ಪ್ರವಾಸೋದ್ಯಮ ಸ್ಥಳಗಳು... ಇವೆಲ್ಲವೂ ವಿಶೇಷಚೇತನರು ಕೂಡ ಸುಲಭವಾಗಿ ಬಳಸಲು ಅನುಕೂಲಕರವಾಗಿರುವಂತೆ ನಿರ್ಮಾಣ ವಿನ್ಯಾಸ ಹೊಂದಿರಬೇಕು ಎಂಬ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಗೋವಾವನ್ನು ಹೇಗೆ ವಿಶೇಷಚೇತನರಿಗೂ ಸೂಕ್ತವೆನ್ನಿಸುವ ಪ್ರವಾಸೋದ್ಯಮ ಸ್ಥಳವಾಗಿಸಬಹುದು ಎಂಬ ಬಗ್ಗೆ ಅಲ್ಲಿನ ಸರ್ಕಾರಕ್ಕೆ ಸಲಹೆಗಳನ್ನು ನೀಡಿದ ಶ್ರೇಯಸ್ಸು ಅವರದ್ದಾಗಿದೆ. ಅಲ್ಲದೆ, ಗೋವಾಗೆ ಆಕ್ಸೆಸಿಬಲ್ ಕಾರಿನಲ್ಲಿ ಪ್ರಯಾಣಿಸಿದ ಮೊದಲ ವ್ಯಕ್ತಿ ಅವರಾಗಿದ್ದಾರೆ. ಪುಟ್ಟಪರ್ತಿಯಲ್ಲಿ ಚಿತ್ರಾವತಿ ಘಾಟನ್ನು ಸುಂದರಗೊಳಿಸುವ ಕಾಮಗಾರಿ ವೇಳೆ, ವಿಶೇಷಚೇತನರೂ ಆರತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವಂತೆ ನಿರ್ಮಾಣವನ್ನು ವಿನ್ಯಾಸಗೊಳಿಸಿ ಎಲ್ಲರ ಗಮನ ಸೆಳೆದಿದ್ದಾರೆ. ಪುಟ್ಟಪರ್ತಿಯ ಆಶ್ರಮದ ಪಬ್ಲಿಕ್ ಕ್ಯಾಂಟೀನನ್ನು ಕೂಡ ವಿಶೇಷ ಚೇತನರ ಬಳಕೆಗೆ ಸೂಕ್ತವಾಗಿರುವಂತೆ ವಿನ್ಯಾಸಗೊಳಿಸಲು ಅವರು ಕಾರಣಕರ್ತರಾಗಿದ್ದಾರೆ. "ಅಕ್ಸೆಸಿಬಲ್ ಪುಟ್ಟಪರ್ತಿ" ಎಂಬ ತಂಡ ಕಟ್ಟಿ, ಅದರ ಮೂಲಕ ದುರ್ಗೆ, ಆಂಜನೇಯ ದೇವಸ್ಥಾನಗಳ ಜೊತೆಗೆ ಒಂದು ಶಾಪಿಂಗ್‌ಮಾಲ್ ಸಹ "ಸರ್ವಮಾನ್ಯ ವಿನ್ಯಾಸ(ಯೂನಿವರ್ಸಲ್ ಡಿಸೈನ್)"ನೊಂದಿಗೆ ನಿರ್ಮಾಣಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ನಾವಿರುವ ಪ್ರಪಂಚವು ಕೋಟ್ಯಂತರ ಸಂಖ್ಯೆಯಲ್ಲಿರುವ ವಿಶೇಷಚೇತನರಿಗೂ ಸೂಕ್ತ ಸ್ಥಳವಾಗಬೇಕೆಂದರೆ, ಈ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಕೆಲಸಗಳಾಗಬೇಕು ಎಂಬುದು ಅವರ ಅಭಿಪ್ರಾಯವಾಗಿದೆ. "ವ್ಹೀಲ್ ಚೇರ್ ವಾರಿಯರ್ ಆಫ್ ಇಂಡಿಯಾ" ಎಂದೇ ಹೆಸರಾಗಿರುವ ಕೌಸ್ತವ್, ಭಾರತವು ವ್ಹೀಲ್ ಚೇರ್ ಸ್ನೇಹಿ ದೇಶವಾಗಿ ಪರಿವರ್ತನೆಗೊಳ್ಳಬೇಕು ಎಂಬ ಬಯಕೆ ಹೊಂದಿದ್ದಾರೆ. "ಯೂನಿವರ್ಸಲ್ ಡಿಸೈನ್" ಬಗೆಗಿನ ಜಾಗೃತಿಯು ಮೊದಲಿಗೆ ಮನೆಯ ಮಟ್ಟದಲ್ಲಿಯೇ ಆರಂಭವಾಗಬೇಕು ಎಂದು ಗಮನಸೆಳೆಯುತ್ತಾರೆ. ವಿಶೇಷ ಚೇತನರಿಗೂ ತಮ್ಮ ಗರಿಷ್ಠ ಸಾಮರ್ಥ್ಯ ದುಡಿಸಿಕೊಳ್ಳಲು ಹಾಗೂ ಸ್ವತಂತ್ರವಾಗಿ ಇರಲು ಅನುವು ಮಾಡಿಕೊಡುವುದೇ "ಯೂನಿವರ್ಸಲ್ ಡಿಸೈನ್"ನ ತತ್ವ ಎಂದು ವಿವರಿಸುತ್ತಾರೆ.

ಬೆಂಗಳೂರಿನಲ್ಲಿ ವಿಶೇಷ ಚೇತನ ಸ್ನೇಹಿ ರಾಷ್ಟ್ರವೊಂದರ ನಿರ್ಮಾಣ ಹಾಗೂ ಔರಂಗಾಬಾದಿನ ಎಂಜಿಎಂ ವಿಶ್ವವಿದ್ಯಾಲಯದ ಸರ್ವಮಾನ್ಯ ವಿನ್ಯಾಸಕ್ಕೂ ಸಾಯಿ ಕೌಸ್ತವ್ ಅತ್ಯಮೂಲ್ಯ ಕೊಡುಗೆ ನೀಡಿದ್ದಾರೆ.

ಕೌಸ್ತವ್ ಪುಸ್ತಕ ಅನುವಾದ: ಶ್ರೀ ಸಾಯಿ ಕೌಸ್ತವ್ ಅವರ ಬದುಕು ಪ್ರತಿಯೊಬ್ಬರಿಗೂ ಪ್ರೇರಣಾದಾಯಕ ಎನ್ನುವ ಮಹಾದೇವಪುರ ಕ್ಷೇತ್ರದ ಮಾಜಿ ಶಾಸಕ ಹಾಗೂ ಮಾಜಿ ಸಚಿವ ಶ್ರೀ ಅರವಿಂದ ಲಿಂಬಾವಳಿ ಅವರು, ಕೌಸ್ತವ್ ಅವರು ಬರೆದಿರುವ "ಮೈ ಲೈಫ್, ಮೈ ಲವ್, ಮೈ ಡಿಯರ್ ಸ್ವಾಮಿ" ಕೃತಿಯನ್ನು ಕನ್ನಡಕ್ಕೆ ಭಾಷಾಂತರ ಮಾಡಿಸುವ ಕಾರ್ಯ ಮಾಡಿದ್ದಾರೆ. ತಮ್ಮ ಕ್ಷೇತ್ರದ ಮಂಜುನಾಥ್ ಪಾಟೀಲ್, ಪಾಪಣ್ಣ ಮತ್ತಿತರರ ಸಹಾಯದಿಂದ ಈ ಅನುವಾದ ಕಾರ್ಯ ಮಾಡಿಸಿ ಅದರ ಲೋಕಾರ್ಪಣೆಯನ್ನೂ ಸ್ವತಃ ಅವರೇ ನೆರವೇರಿಸಿದ್ದಾರೆ.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**